Swabhimani Sahakari

ಸ್ವಾಭಿಮಾನಿ ಸಹಕಾರಿ

Pages : 28 / 12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 11
November - 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

69ನೇ ಅಖಿಲ ಭಾರತ ಸಹಕಾರ ಸಪ್ತಾಹ - 2022

ನವೆಂಬರ್ 14 ರಿಂದ 20, 2022

ಧ್ಯೇಯ : ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯ

GeM
Government
e Marketplace



- ಸಹಕಾರ ಸಂಸ್ಥೆಗಳಲ್ಲಿ ವ್ಯಾಪಾರ ಸರಳೀಕರಣ, ರಫ್ತು ವೃದ್ಧಿಗಾಗಿ ಜೆಮ್-ಪೋರ್ಟಲ್ ಬಳಕೆ
- ಸಹಕಾರ ಮಾರುಕಟ್ಟೆ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ
- ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರಲು ಪುನರ್ ನಿರ್ಮಿಸುವುದು
- ಉದ್ಯಮಶೀಲತೆ ಅಭಿವೃದ್ಧಿ, ಸಾರ್ವಜನಿಕ - ಖಾಸಗಿ - ಸಹಕಾರಿ ಸಹಭಾಗಿತ್ವವನ್ನು ಬಲಗೊಳಿಸುವುದು
- ಯುವಜನ, ಮಹಿಳೆ, ಅಬಲವರ್ಗ ಮತ್ತು ಆರೋಗ್ಯಕ್ಕಾಗಿ ಸಹಕಾರ ಸಂಸ್ಥೆ
- ಆರ್ಥಿಕ ಸೇರ್ಪಡೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳ ಡಿಜಿಟಲೀಕರಣ ಮತ್ತು ಸಹಕಾರ ಸಂಸ್ಥೆಗಳ ದತ್ತಾಂಶವನ್ನು ಬಲಪಡಿಸುವುದು
- **17.11.2022 ಗುರುವಾರ ಚಿಕ್ಕಮಗಳೂರು**

ಆವಿಷ್ಕಾರ ಪೋಷಣೆ, ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನ ಮತ್ತು ತಂತ್ರಜ್ಞಾನದ ಉನ್ನತೀಕರಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮ

01.11.2022
ಕನ್ನಡ ರಾಜ್ಯೋತ್ಸವ

11.11.2022
ಕನಕದಾಸ
ಜಯಂತಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5689

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1569

ಜಿ. ನಂಜನಗೌಡ

ಕನ್ನಡ ರಾಜ್ಯೋತ್ಸವ ಆಚರಣೆಯಿಂದಾಗಿ ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿಗಳ ಜಾಗೃತಿ ಮೂಡಿಸುವುದು ಮತ್ತು ಕನ್ನಡ ಭಾಷೆಯ ವೃದ್ಧಿಗಾಗಿ ಸಂಭ್ರಮಿಸುವ ಉತ್ಸವ ಕನ್ನಡ ರಾಜ್ಯೋತ್ಸವ. ಅದರಂತೆ ಸಹಕಾರ ಕ್ಷೇತ್ರದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯಿಂದ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಸಹಕಾರಿ ಕ್ಷೇತ್ರದ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ವಿಚಾರ ವಿನಿಮಯಗಳನ್ನು ನಡೆಸುವ ಕಾರ್ಯ ಅತ್ಯಂತ ಶ್ರದ್ಧೆಯಿಂದ ಉತ್ಸಾಹದಿಂದ ನಡೆಯುತ್ತದೆ. ಎಲ್ಲ ಸಹಕಾರಿಗಳು ತಮ್ಮನ್ನು ಈ ಸಪ್ತಾಹದ ಆಚರಣೆಯಲ್ಲಿ ತೊಡಗಿಸಿಕೊಳ್ಳುವುದು ವಿಶೇಷ ಹಾಗೂ ಸ್ವಾಗತಾರ್ಹ

ಸಹಕಾರ ಸಪ್ತಾಹದ ಆಚರಣೆಯಿಂದ ಜನರಲ್ಲಿ ಸಹಕಾರ ಕುರಿತು ಜಾಗೃತಿ ವೃದ್ಧಿಯ ಆಶಯ. ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ.

ಆತ್ಮೀಯ ಸಹಕಾರಿ ಬಂಧುಗಳಿಗೆಲ್ಲ ಕನ್ನಡ ರಾಜ್ಯೋತ್ಸವ ಹಾಗೂ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು.

ಕನ್ನಡ ರಾಜ್ಯೋತ್ಸವ ಆಚರಣೆಯಿಂದಾಗಿ ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿಗಳ ಜಾಗೃತಿ ಮೂಡಿಸುವುದು ಮತ್ತು ಕನ್ನಡ ಭಾಷೆಯ ವೃದ್ಧಿಗಾಗಿ ಸಂಭ್ರಮಿಸುವ ಉತ್ಸವ ಕನ್ನಡ ರಾಜ್ಯೋತ್ಸವ. ಅದರಂತೆ ಸಹಕಾರ ಕ್ಷೇತ್ರದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯಿಂದ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಸಹಕಾರಿ ಕ್ಷೇತ್ರದ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ವಿಚಾರ ವಿನಿಮಯಗಳನ್ನು ನಡೆಸುವ ಕಾರ್ಯ ಅತ್ಯಂತ ಶ್ರದ್ಧೆಯಿಂದ ಉತ್ಸಾಹದಿಂದ ನಡೆಯುತ್ತದೆ. ಎಲ್ಲ ಸಹಕಾರಿಗಳು ತಮ್ಮನ್ನು ಈ ಸಪ್ತಾಹದ ಆಚರಣೆಯಲ್ಲಿ ತೊಡಗಿಸಿಕೊಳ್ಳುವುದು ವಿಶೇಷ ಹಾಗೂ ಸ್ವಾಗತಾರ್ಹ.

ಸಹಕಾರ ಕ್ಷೇತ್ರಕ್ಕೆ 118 ವರ್ಷಗಳ ಇತಿಹಾಸ. ದೇಶದ ಅರ್ಥ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಕೊಡುಗೆಯನ್ನು ನೀಡುತ್ತ ಬಂದಿದೆ. ವಿಶೇಷವಾಗಿ ಗ್ರಾಮೀಣ ಅಭಿವೃದ್ಧಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಕಂಡುಕೊಳ್ಳಲು ನೆರವಾಗಿರುವ ದೇಶದಲ್ಲಿ ಹಸಿರು ಕ್ರಾಂತಿಯ ಹಾಗೂ ಶ್ವೇತ ಕ್ರಾಂತಿಯ ಹರಿಕಾರನೆನಿಸಿಕೊಂಡಿರುವ ಈ ಸಹಕಾರ ವ್ಯವಸ್ಥೆ ಪ್ರಸಕ್ತ ಅರ್ಥವ್ಯವಸ್ಥೆಯ ಖಾಸಗೀಕರಣ, ಜಾಗತೀಕರಣ ಮತ್ತು ಉದಾರೀಕರಣ ವ್ಯವಸ್ಥೆಯಲ್ಲಿ ಕ್ಷೇತ್ರದ ಪೈಪೋಟಿ ಇದ್ದಾಗ್ಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಈ ಕ್ಷೇತ್ರಕ್ಕೆ ಪರ್ಯಾಯ ವ್ಯವಸ್ಥೆ ಇನ್ನೂ ಸೃಷ್ಟಿಯಾಗದೇ ಇರುವುದು ಸಹಕಾರಿಗಳಿಗೆ ಸದಾವಕಾಶ.

ಈ ಕ್ಷೇತ್ರದಲ್ಲಿ ನೇರವಾಗಿ ಜನರ ತೊಡಗಿಸುವಿಕೆ ಇರುವುದರಿಂದ ಜನರ ಬೇಕು ಬೇಡಿಕೆಗಳಿಗಳಿಗೆ ಸ್ಪಂದಿಸಬೇಕಾಗುವುದರಿಂದ ಅನೇಕ ರೀತಿಯ ಜನಾಭಿಪ್ರಾಯ ಪಡೆದು ಕಾರ್ಯನಿರ್ವಹಿಸಬೇಕಾದುದ-ರಿಂದ ಅನೇಕ ಸಮಸ್ಯೆಗಳು ಬರುವುದು ಸಹಜ. ಆ ಎಲ್ಲ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡು ಅಭಿವೃದ್ಧಿಯತ್ತ ಸಾಗುವ ಸಂದೇಶವನ್ನು ಈ ಸಹಕಾರಿ ಸಪ್ತಾಹದ ಆಚರಣೆಗಳು ಜನರಿಗೆ ಸಹಕಾರಿಗಳಿಗೆ ನೀಡುವ ಕಾರ್ಯವನ್ನು ಮಾಡುತ್ತವೆ. ಆದ್ದರಿಂದ ಎಲ್ಲ ಸಹಕಾರಿಗಳು ಈ ಸಪ್ತಾಹದ ಆಚರಣೆಯಲ್ಲಿ ಪಾಲ್ಗೊಳ್ಳಿ ಸಪ್ತಾಹವನ್ನು ಯಶಸ್ವಿಗೊಳಿಸಿ.

ದಿನಾಂಕ 19.10.2022 ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಮಾನ್ಯ ಸಹಕಾರ ಸಚಿವರ ನೇತೃತ್ವದಲ್ಲಿ 69ನೇ ಸಹಕಾರ ಸಪ್ತಾಹದ ಆಚರಣೆಯ ಬಗ್ಗೆ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ದಿನಾಂಕ 17.11.2022 ರಂದು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸ್ಥಳೀಯ ಸಹಕಾರ ಇಲಾಖೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಎಲ್ಲ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ "ಆವಿಷ್ಕಾರ ಪೋಷಣೆ, ಸ್ಟಾರ್ಟ್ ಆಪ್‌ಗಳಿಗೆ ಉತ್ತೇಜನ ಮತ್ತು ತಂತ್ರಜ್ಞಾನದ ಉನ್ನತೀಕರಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬ ವಿಷಯದ ಬಗ್ಗೆ ಚಿಕ್ಕಮಗಳೂರಿನಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಸಹಕಾರಿ ಸಂಸ್ಥೆಗಳು ಸಹಕಾರಿಗಳು ಸಕ್ರೀಯವಾಗಿ ಭಾಗವಹಿಸಿ ಸಪ್ತಾಹದ ಆಚರಣೆಯನ್ನು ಯಶಸ್ವಿಗೊಳಿಸುವಿರೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.. 2
ಸಂಪಾದಕೀಯ.. 3
ಜ್ಞಾನ ಜ್ಯೋತಿ.. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು 05–08, 12–15
ಸೌಹಾರ್ದ ಸಹಕಾರಿಗಳ ಸಮಾಚಾರಗಳು 16–18
ಲೇಖನಗಳು :
ಮನಶಾಸ್ತ್ರಜ್ಞರ ಪ್ರಕಾರ ಹೆಚ್ಚು ಧನಾತ್ಮಕವಾಗಿರಲು 17 ಮಾರ್ಗದರ್ಶಿ ಸೂತ್ರಗಳು 19–22
ಕನ್ನಡಿಗರ ಹಬ್ಬ – ಕನ್ನಡ ರಾಜ್ಯೋತ್ಸವ 24–25
ಸಹಕಾರ ಸಂಘಗಳಲ್ಲಿ ಸಹಕಾರ ಮೌಲ್ಯಗಳ ಪಾಲನೆಯ ಅಗತ್ಯತೆ 26–28

ಸಂಪಾದಕೀಯ

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಮರುಜಾರಿ ನಿರ್ಧಾರ ಸ್ವಾಗತಾರ್ಹ ಹಾಗೂ ಅಭಿನಂದನೀಯ. ಸೌಹಾರ್ದ ಸಹಕಾರಿ ಸಂಸ್ಥೆಗಳ ಸದಸ್ಯರಿಗೂ ಅನ್ವಯ

ಕರ್ನಾಟಕ ಸರಕಾರ ರಾಜ್ಯದಲ್ಲಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ನವೆಂಬರ 1 ರಿಂದ ಪುನರ್ ಜಾರಿಗೆ ತಂದಿರುವುದು ಸ್ವಾಗತಾರ್ಹ. ಈ ಯೋಜನೆಯನ್ನು ಜಾರಿಮಾಡಲು ಕ್ರಮ ತೆಗೆದುಕೊಂಡಿರುವ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿಶೇಷವಾಗಿ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ ಹಾಗೂ ಸಚಿವ ಸಂಪುಟದ ಎಲ್ಲ ಸಚಿವರಿಗೆ ರಾಜ್ಯದ ಸಮಸ್ತ ಸಹಕಾರಿಗಳ ಪರವಾಗಿ ಅಭಿನಂದನೆಗಳು.

ರಾಜ್ಯದಲ್ಲಿ ನವೆಂಬರ 14, 2003 ರಲ್ಲಿ ಪ್ರಪ್ರಥಮವಾಗಿ ಯಶಸ್ವಿನಿ ಆರೋಗ್ಯ ಯೋಜನೆ ಜಾರಿಯಾಗಿ 2017 ರವರೆಗೆ ಯಶಸ್ವಿಯಾಗಿ ನಡೆಸಲಾಯಿತು. ಈ ಅವಧಿಯಲ್ಲಿ ಲಕ್ಷಾಂತರ ರೈತರ ಹಾಗೂ ನಗರಗಳ ಸಹಕಾರಿಗಳು ಈ ಯೋಜನೆಯ ಪೂರ್ಣ ಪ್ರಯೋಜನ ಪಡೆದುಕೊಂಡಿದ್ದಾರೆ. ಈ ಯೋಜನೆಯಿಂದಾಗಿ ವಿಶೇಷವಾಗಿ ಗ್ರಾಮೀಣ ಜನರಿಗೆ ತುಂಬಾ ಅನುಕೂಲವಾಗಿತ್ತು. ಸಹಕಾರಿ ಸಂಸ್ಥೆಗಳ ಎಲ್ಲ ಸದಸ್ಯರು ಅವರ ಕುಟುಂಬ ವರ್ಗದವರು ಈ ಯೋಜನೆಯಡಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಯೋಜನೆಯ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಪ್ರಯೋಜನವೂ ಆಗಿದೆ.

ಆದರೆ ಕಾರಣಾಂತರಗಳಿಂದ ಮತ್ತು ಸರಕಾರದ ಪರಿಷ್ಕೃತ ಆರೋಗ್ಯ ಯೋಜನೆಗಳ ಜಾರಿಯಿಂದ ಕರ್ನಾಟಕದ ಜನರಿಗೆ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶದಿಂದ ಈ ಯೋಜನೆಯನ್ನು 2017ರಲ್ಲಿ ನಿಲ್ಲಿಸಲಾಯಿತು. ಆದರೆ ಸರಕಾರದ ಪರಿಷ್ಕೃತ ಆರೋಗ್ಯ ಯೋಜನೆಗಳು ಜನ ಸಾಮಾನ್ಯರಿಗೆ ಸಹಕಾರ ವ್ಯವಸ್ಥೆಯಿಂದ ತಲುಪಿಸಲು ಸಾಧ್ಯವಾಗಲಿದೆ. ಹೀಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಮರುಪ್ರಾರಂಭಿಸಲು ಸಮಾಜದ ಎಲ್ಲ ವರ್ಗದ ಜನರಿಂದ ಬೇಡಿಕೆ ಪ್ರಾರಂಭವಾಯಿತು. ವಿಶೇಷವಾಗಿ ಗ್ರಾಮೀಣ ಜನರು ಸಹಕಾರಿ ಸಂಸ್ಥೆಗಳು ಈ ಯೋಜನೆ ಮತ್ತೆ ಪ್ರಾರಂಭಿಸಲು ಸರಕಾರವನ್ನು ಒತ್ತಾಯಿಸುವುದರ ಪರಿಣಾಮವಾಗಿ ಸರಕಾರ ನವೆಂಬರ 1 ರಿಂದ ಈ ಯೋಜನೆಯನ್ನು ಪುನರ್ ಜಾರಿ ಮಾಡಿದೆ. ಇದೊಂದು ಸ್ವಾಗತಾರ್ಹ ಹಾಗೂ ಅಭಿನಂದನೀಯ ಮತ್ತು ಜನಪರ ನಿರ್ಧಾರವೆಂದು ವ್ಯಾಖ್ಯಾನಿಸಬಹುದು.

ಈ ಯೋಜನೆಯ ರೂಪುರೇಷೆಗಳು ಜನರು ಈ ಯೋಜನೆಯ ಪ್ರಯೋಜನವನ್ನು ಹೇಗೆ ಪಡೆಯಬೇಕು ಹೇಗೆ ಹಾಗೂ ಎಲ್ಲಿ ನೊಂದಾಯಿಸಿಕೊಳ್ಳಬೇಕು ಸಹಕಾರ ಇಲಾಖೆಯ ಹಾಗೂ ಸಹಕಾರ ಸಂಸ್ಥೆಗಳ ಪಾತ್ರವೇನು ಇತ್ಯಾದಿ ವಿವರಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲಿದೆ. ಸೌಹಾರ್ದ ಸಹಕಾರಿಗಳು ಸೇರಿದಂತೆ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳ ಸದಸ್ಯರು ಹಾಗೂ ಅವರ ಕುಟುಂಬವರ್ಗದವರಿಗೆ ಈ ಯೋಜನೆ ಅನ್ವಯಿಸುವುದರಿಂದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಪದಾಧಿಕಾರಿಗಳು, ಅಧಿಕಾರಿಗಳು ಹೆಚ್ಚು ಆಸಕ್ತಿವಹಿಸಿ ಯೋಜನೆಯ ಪ್ರಯೋಜನ ಪರಿಣಾಮಕಾರಿಯಾಗಿರುವಂತೆ, ಫಲಕಾರಿಯಾಗಿರುವಂತೆ ಕ್ರಮವಿಡುವುದು ಅಗತ್ಯ.

ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

"ಸಾಧನೆಯ ಸಂದೇಶಗಳು"

ಸಾಧಿಸಲು ಹೊರಟವನ ಸಾಧನೆ ಮಾತಾಗಬೇಕೇ ಹೊರತು ಮಾತೇ ಸಾಧನೆಯಾಗಬಾರದು. ಕೆಲಸದಲ್ಲಿ ದೇವರನ್ನ ಅಥವಾ ದೇವರ ನೆನೆದು ಕೆಲಸವನ್ನ ಹೇಗಾದರು ಸರಿ ನಿಷ್ಠೆ ಪ್ರಾಮಾಣಿಕತೆ ಶ್ರದ್ಧೆ ಭಕ್ತಿ ಪರಿಶ್ರಮದಿಂದ ಮಾಡಬೇಕು. ಒಂದು ದಿನ ಬಂದೇ ಬರುತ್ತೆ ಸ್ನೇಹಿತರೆ ನಮ್ಮೆಲ್ಲಾ ಪರಿಶ್ರಮಕ್ಕೆ ಉತ್ತರ ಸಿಗುತ್ತೆ ನಮ್ಮೆಲ್ಲರ ಮುಖದಲ್ಲೂ ಸಾರ್ಥಕತೆಯ ಭಾವನೆ ವ್ಯಕ್ತವಾಗುತ್ತೆ. ಆ ದಿನ ಅದೇ ದಿನ ನಮ್ಮೆಲ್ಲರ ಮೌನವೂ ಮಾತಾಗುತ್ತೆ. ಮಾಡುವುದು ಮಾತನಾಡುವಷ್ಟು ಸುಲಭವಾಗಿದ್ದರೆ ನಮ್ಮ ಸಮಾಜ ಇಂದು ಈ ಸ್ಥಿತಿಗೆ ತಲುಪುತ್ತಿರಲಿಲ್ಲ.

"ಆಡದೇ ಮಾಡುವವ ರೂಢಿ ಯೊಳಗುತ್ತಮನು,
ಆಡಿ ಮಾಡುವವ ಮಧ್ಯಮನು,
ಆಡಿಯೂ ಮಾಡದವ ಅಧಮನು'

ಎನ್ನುವ ಮಾತನ್ನು ನಾವೆಲ್ಲ ಕೇಳಿದ್ದೇವೆ. ಆದರೆ ನಾವು ಯಾವ ಗುಂಪಿಗೆ ಸೇರಿದವರು ಎನ್ನುವುದನ್ನು ನಮ್ಮ ಅಂತರಂಗವೇ ಹೇಳಬೇಕು. ಮಾತು ಮುತ್ತು, ಮಾತು ಜ್ಯೋತಿರ್ಲಿಂಗ, ಆಡುವ ಮೊದಲು ಯೋಚಿಸು, ನುಡಿದಂತೆ ನಡೆಯಬೇಕು, ಇಲ್ಲವಾದರೆ ಸುಮ್ಮನಿರಬೇಕು ಎನ್ನುವ ಅದೆಷ್ಟೋ ವಿಚಾರಗಳು ನಮಗೆ ತಿಳಿದಿದ್ದರೂ ಸಹ ಜವಾಬ್ದಾರಿಯನ್ನು ಬೇರೆಯವರ ಮೇಲೆ ಹೊರಿಸಿ ನಾವು ನಿಶ್ಚಿಂತರಾಗಿ ಮಾತನಾಡುವಾಗ, ಮೇಲೆ ಹೇಳಿದ ಯಾವುದೇ ಮಾತಿನ ಕುರಿತು ಯೋಚಿಸುವುದಿಲ್ಲ. ಅದರ ಹಿಂದೆ ಇರುವ ಶ್ರಮವೆಷ್ಟು? ಆ ಯಶಸ್ಸಿನ ಹಿಂದಿರುವ ಕಷ್ಟ–ನಷ್ಟಗಳೆಷ್ಟು ಎನ್ನುವುದು. ಎನ್ನುವ ಮಾತಿನಂತೆ ಜವಾಬ್ದಾರಿಯಿಂದ ಕಳಚಿಕೊಂಡವ–ರಿಗೆ ಖಂಡಿತಾ ಅಧಿಕಾರ ಸಿಗುವುದಿಲ್ಲ. ಸಿಕ್ಕಿದರೂ ಇದಕ್ಕೆ ಅರ್ಥವಿಲ್ಲ. ವ್ಯಕ್ತಿ ಯಾವ ಕ್ಷೇತ್ರದಲ್ಲಿ ತನ್ನನ್ನು ತಾನು ಹೆಚ್ಚು ತೊಡಗಿಸಿಕೊಂಡು ಪರಿಶ್ರಮಯುಕ್ತ ದುಡಿಮೆ ಮಾಡುತ್ತಾನೋ ಅವನಿಗೆ ಅಧಿಕಾರದ ಹಕ್ಕು, ಮಾತನಾಡುವ ಹಕ್ಕು, ತನ್ನಿಂದ ತಾನೇ ಬರುತ್ತದೆ. ಸಾಧಿಸಲು ಆಸಕ್ತಿ ಕಳೆದುಕೊಂಡಾಗ ಮನಸ್ಸನ್ನು ಪ್ರೇರೇಪಿಸಲು ಪ್ರಯತ್ನಿಸಿ. ಸಾಧಕರ ಜೀವನಚರಿತ್ರೆಗಳನ್ನು ಓದಿ. ಇದರಿಂದ ಅವರು ಬದುಕಿನಲ್ಲಿ ಏನೆಲ್ಲ ಕಷ್ಟಗಳನ್ನು ಅನುಭವಿಸಿದರು. ಅದನ್ನು ಹೇಗೆ ಎದುರಿಸಿದರು ಎಂಬುದು ತಿಳಿಯುತ್ತದೆ. ಅವರ ಸಾಧನೆಯ ಹಾದಿ ನಿಮ್ಮನ್ನು ಕೂಡ ಉನ್ನತ ಸಾಧನೆ ಮಾಡುವಂತೆ ಪ್ರೇರೇಪಿಸುತ್ತದೆ.

- **ಸಕಾರಾತ್ಮಕವಾಗಿ ಯೋಚಿಸಿ :** ಸಕಾರಾತ್ಮಕ ಚಿಂತನೆಗಳು ಸಾಧನೆಗೆ ಪ್ರೇರೇಪಿಸುತ್ತವೆ. ಆದಕಾರಣ ಸದಾಕಾಲ ಒಳ್ಳೆಯ ವಿಚಾರಗಳ ಬಗ್ಗೆಯೇ ಚಿಂತಿಸಿ. ನಿಮ್ಮಲ್ಲಿರುವ ಸಾಮರ್ಥ್ಯ, ಕೌಶಲಗಳ ಬಗ್ಗೆ ಮನಸ್ಸಿಗೆ ಆಗಾಗ ಮನವರಿಕೆ ಮಾಡಿ. ಮುಂದೆ ಆಗುವುದೆಲ್ಲವೂ ಒಳ್ಳೆಯದೇ ಆಗಿರುತ್ತದೆ ಎಂಬ ಸಕಾರಾತ್ಮಕ ಮನೋಭಾವದಿಂದ ಕಾರ್ಯನಿರ್ವಹಿಸಿ. ನಕಾರಾತ್ಮಕ ಚಿಂತನೆಗಳು ಮನಸ್ಸನ್ನು ಆವರಿಸದಂತೆ ಎಚ್ಚರ ವಹಿಸಿ.
- **ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಿರಿ :** ನಿಮ್ಮ ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸಿ. ಅವುಗಳನ್ನು ವಿಶ್ಲೇಷಿಸಿ. ಪ್ರತಿ ಸಮಸ್ಯೆಗೂ ಒಂದು ಪರಿಹಾರವಿರುವಂತೆ ಅವುಗಳಿಂದ ಹೊರಬರಲು ಕೂಡ ಒಂದು ದಾರಿ ಇದ್ದೇ ಇರುತ್ತದೆ. ಆ ದಾರಿ ಯಾವುದು ಎಂಬುದನ್ನು ಯೋಚಿಸಿ. ಖಂಡಿತಾ ಪರಿಹಾರ ಸಿಕ್ಕೇಸಿಗುತ್ತದೆ.
- **ಹೋಲಿಸಿಕೊಂಡು ಕೊರಗಬೇಡಿ :** ನಮ್ಮನ್ನು ಸಾಧನೆಯ ಹಾದಿಯಿಂದ ಹಿಂದೆ ಸರಿಯುವಂತೆ ಮಾಡುವುದು ಅಥವಾ ಸೋಲಿನ ಹಾದಿಯಲ್ಲಿ ನಡೆಯುವಂತೆ ಮಾಡುವುದು ಹೋಲಿಕೆ. ಹೌದು, ಇನ್ನೊಬ್ಬರೊಂದಿಗೆ ನಮ್ಮನ್ನು ನಾವು ಹೋಲಿಸಿಕೊಳ್ಳುವುದರಿಂದ ನಮ್ಮ ಆತ್ಮವಿಶ್ವಾಸ ಕುಗ್ಗುತ್ತದೆ. ಯಾವುದೇ ಕೆಲಸ ಮಾಡಲು ಕೂಡ ಮನಸ್ಸು ಹಿಂಜರಿಯುತ್ತದೆ. ಆದಕಾರಣ ಇನ್ನೊಬ್ಬರೊಂದಿಗೆ ನಿಮ್ಮನ್ನು ನೀವು ಹೋಲಿಸಿಕೊಳ್ಳಬೇಡಿ.
- **ಮಾಹಿತಿ ಕಲೆ ಹಾಕಿರಿ :** ಯಾವುದೇ ಕಾರ್ಯ ಮಾಡುವ ಮುನ್ನ ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಲೆ ಹಾಕಿ. ನಿಮ್ಮ ಬಳಿ ಹೆಚ್ಚು ಮಾಹಿತಿಯಿದ್ದಷ್ಟು ಆ ಕೆಲಸ ಸುಲಭವಾಗುತ್ತದೆ. ಜೊತೆಗೆ ಆ ಹಾದಿಯಲ್ಲಿ ಎದುರಾಗುವ ಸವಾಲುಗಳು, ಅದನ್ನು ಎದುರಿಸುವ ಮಾರ್ಗ ಎಲ್ಲವೂ ನಿಮಗೆ ಮೊದಲೇ ಸ್ಪಷ್ಟವಾಗುತ್ತದೆ. ಮಾಹಿತಿ ಕೊರತೆಯಿದ್ದಾಗ ಸೂಕ್ತ ನಿರ್ಧಾರ ಕೈಗೊಳ್ಳಲು ಕೂಡ ಸಾಧ್ಯವಾಗುವುದಿಲ್ಲ. ಮಾಹಿತಿಯಿದ್ದಾಗ ಮುಂದೆ ಸಾಗಲು ಮನಸ್ಸೇ ನಿಮಗೆ ಪ್ರೇರಣೆ ನೀಡುತ್ತದೆ ಹಾಗೂ ಸಾಧನೆ ಮಾತಾಗುತ್ತದೆ.

ಸಾಧನೆಯ ಬಹು ದೊಡ್ಡ ಸವಾಲೆಂದರೆ ಒಮ್ಮೆ ಗಳಿಸಿದ ಯಶಸ್ಸನ್ನು ಉಳಿಸಿಕೊಂಡು ಹೋಗುವುದು. ನೀವು ಯಶಸ್ಸಿನ ಯಾವುದೇ ಹಂತವನ್ನು ತಲುಪಿದರೂ ಕೂಡ ಸತತ ಪರಿಶ್ರಮದಿಂದ ಮಾತ್ರ ಆ ಯಶಸ್ಸನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯ. ಸ್ವಲ್ಪ ಯಶಸ್ಸು ದೊರೆತ ಕೂಡಲೇ ಸಾಧನೆಯ ಹಾದಿಯಿಂದ ವಿಮುಖರಾಗಿ ದಾರಿ ತಪ್ಪದೇ ನಿರಂತರ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುವುದೇ ನೀವು ಪಡೆದ ಸಾಧನೆಯ ಯಶಸ್ಸಿಗೆ ನೀಡುವ ಗೌರವ.

ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

ದಾವಾ ದಾಖಲಾತಿಗಳು : ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 24,619 ಆಗಿರುತ್ತದೆ. ಇವುಗಳ ಪೈಕಿ 13,688 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು – 10,931.

ಅಕ್ಟೋಬರ್ ತಿಂಗಳ ಪ್ರಕರಣಗಳು : ದಾವಾಪ್ರಕರಣ 554 ಇತ್ಯರ್ಥಗೊಂಡ ಪ್ರಕರಣಗಳು 198

ಅಮಲ್ಜಾರಿ ಪ್ರಕರಣಗಳು : ಒಟ್ಟು 5,386 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1018 ಪ್ರಕರಣಗಳು ಇತ್ಯರ್ಥಗೊಂಡಿದ್ದು, 4,368 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ 87 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

ಸಹಕಾರ ಸಚಿವ ಶ್ರೀ ಎಸ್.ಸೋಮಶೇಖರರವರ ಅಧ್ಯಕ್ಷತೆಯಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಪೂರ್ವಭಾವಿ ಸಿದ್ಧತಾ ಸಭೆ ಸಹಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಲು ಕರೆ

ಬೆಂಗಳೂರು : 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 19–10–2022 ರಂದು ವಿಧಾನ ಸೌಧದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವತಿಯಿಂದ ಪೂರ್ವಭಾವಿ ಸಿದ್ಧತಾ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ ಇವರು ವಹಿಸಿದ್ದರು ಸಭೆಯಲ್ಲಿ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಉಮಾಶಂಕರ ಸಹಕಾರ ಸಂಘಗಳ ನಿಬಂಧಕರಾದ ಡಾ. ಕ್ಯಾಪ್ಟನ್ ರಾಜೇಂದ್ರ. ಕೆ. ಮಾಜಿ ಸಚಿವ ಹಾಲಿ ಶಾಸಕ ಶ್ರೀ ಶಿವಾನಂದ ಪಾಟೀಲ್, ಮಾರಾಟ ಮಹಾಮಂಡಳದ ಅಧ್ಯಕ್ಷ ಶ್ರೀ ಎಮ್.ಎನ್. ರಾಜೇಂದ್ರಕುಮಾರರವರು, ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷ ಶ್ರೀ ಎ.ಆರ್.ಪ್ರಸನ್ನಕುಮಾರ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಅನೇಕ ಮಹಾಮಂಡಳಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಹಕಾರಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಪ್ರಾರ್ಥನೆಯಾದ ನಂತರ ಮಹಾಮಂಡಳದ ಅಧ್ಯಕ್ಷರಾದ ಹಾಗೂ ಶಾಸಕರಾದ ಶ್ರೀ ಜಿ.ಟಿ.ದೇವೇಗೌಡ ರವರು ಸಹಕಾರ ಸಚಿವರನ್ನು, ಅತಿಥಿ ಗಣ್ಯರನ್ನು, ಸಹಕಾರಿಗಳನ್ನು, ಅಧಿಕಾರಿಗಳನ್ನು ಸ್ವಾಗತಿಸಿ ಸಹಕಾರ ಸಪ್ತಾಹದ ಉದ್ದೇಶಗಳನ್ನು ವಿವರಿಸಿದರು.

ನಂತರದಲ್ಲಿ ದಿನಾಂಕ 14 ರಿಂದ 20 ರವರೆಗಿನ 7 ದಿನಗಳು ಸಹಕಾರ ಸಪ್ತಾಹವನ್ನು ಆಚರಿಸುವ ಸ್ಥಳ ನೇತೃತ್ವ ವಹಿಸುವ ಸಂಸ್ಥೆಗಳು ಸಹಯೋಗ ನೀಡುವ ಸಂಸ್ಥೆಗಳ ಬಗ್ಗೆ ತೀರ್ಮಾನಿಸಲಾಯಿತು.

ದಿನಾಂಕ 14.11.2022 ಕಲಬುರಗಿ ಜಿಲ್ಲಾ ಬ್ಯಾಂಕ್ ನೇತೃತ್ವದಲ್ಲಿ ಕಲಬುರಗಿ. ದಿನಾಂಕ 15.11.2022 ಕೆ.ಎಮ್.ಎಫ್ ನೇತೃತ್ವದಲ್ಲಿ ಧಾರವಾಡ ದಿನಾಂಕ 16.11.2022 ಪಟ್ಟಣ ಸಹಕಾರ ಬ್ಯಾಂಕುಗಳ ನೇತೃತ್ವದಲ್ಲಿ ಬೆಳಗಾವಿ, 17.11.2022 ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಚಿಕ್ಕಮಗಳೂರು. ದಿನಾಂಕ 18.11.2022 ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕ್ ನೇತೃತ್ವದಲ್ಲಿ ಮಂಗಳೂರು. ದಿನಾಂಕ 19.11.2022 ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ನೇತೃತ್ವದಲ್ಲಿ ಬೆಂಗಳೂರು ಹಾಗೂ ದಿನಾಂಕ 20.112022ರಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನೇತೃತ್ವದಲ್ಲಿ ಮೈಸೂರಿನಲ್ಲಿ ಜರುಗಿಸಲು ತೀರ್ಮಾನಿಸಲಾಯಿತು.

ನಂತರದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಸಹಕಾರ ಸಚಿವ ಶ್ರೀ ಎಸ್. ಟಿ. ಸೋಮಶೇಖರ ರವರು ದೇಶದಲ್ಲಿ ಸಹಕಾರ ನೀತಿಯನ್ನು ಸಿದ್ಧಪಡಿಸಲಾಗುತ್ತಿದೆ. ದಿನಾಂಕ 17.10.2022 ರಂದು ಮಾಜಿ ಕೇಂದ್ರ ಸಚಿವ ಹಾಗೂ ಸಹಕಾರ ನೀತಿ ಸಿದ್ಧತಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಸುರೇಶ ಪ್ರಭು ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆ. ಸಹಕಾರ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲಾಗುತ್ತಿದೆ. ಸಹಕಾರಿ ಇಲಾಖಾಧಿಕಾರಿಗಳು ಸಹಕಾ–ರಿಗಳು ಸಹಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು. ಸಹಕಾರ ಚಳುವಳಿಗೆ ಮುಂಬರುವ ದಿನಗಳಲ್ಲಿ ಸಹಕಾರಿಗಳು ಹೆಚ್ಚಿನ ಆಸಕ್ತಿಯಿಂದ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಒತ್ತಿ ಹೇಳಿದರು. ಮುಂಬರುವ ದಿನಗಳಲ್ಲಿ ಸಹಕಾರಿ ಇಲಾಖೆಯ ಅಧಿಕಾರ ವಿಕೇಂದ್ರೀಕರಣದತ್ತ ಗಮನ ಹರಿಸಲಾಗುವುದು ಎಂದು ತಿಳಿಸಿದರು. ಸಹಕಾರ ಸಪ್ತಾಹದ ಆಚರಣೆ ಜನತೆಗೆ ಒಳ್ಳೆಯ ಸಂದೇಶ ನೀಡುವಂತಾಗಬೇಕು. ಯಶಸ್ವಿನಿ ಯೋಜನೆಯನ್ನು ಮರುಜಾರಿಗೆ ಚಾಲನೆಯನ್ನು ದಿನಾಂಕ 14.11.2022 ತಾರೀಖಿನಂದು ಕಲಬುರಗಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೆರವೇ–ರಿಸಲಿದ್ದಾರೆ ಎಂದು ತಿಳಿಸಿದರು. ಶ್ರೀ ಲಕ್ಷ್ಮೀಪತಯ್ಯನವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 19.10.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರ ಚಳುವಳಿ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್ ಪ್ರಸನ್ನಕುಮಾರ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು, ನಿಕಟಪೂರ್ವ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ರವರು, ಹಿರಿಯ ಸಹಕಾರಿಗಳಾದ ಶ್ರೀ ರಮೇಶ್ ವೈದ್ಯ ರವರು ಉಪಸ್ಥಿತರಿದ್ದರು.

69ನೇ ಅಖಿಲ ಭಾರತ ಸಹಕಾರ ಸಪ್ತಾಹ - 2022

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ದಿನಾಂಕ: 17/11/2022 ರಂದು ಆಚರಣೆ.

ಸಪ್ತಾಹದ ಧ್ಯೇಯ : ಭಾರತ@75 : ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಮತ್ತು ಮುಂದಿನ ಭವಿಷ್ಯ, **ಸಪ್ತಾಹದ ದಿನಾಚರಣೆಯ ವಿಶೇಷ :** ಆವಿಷ್ಕಾರ ಪೋಷಣೆ, ಸ್ಟಾರ್ಟ್ ಆಪ್‌ಗಳಿಗೆ ಉತ್ತೇಜನ ಮತ್ತು ತಂತ್ರಜ್ಞಾನದ ಉನ್ನತೀಕರಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ / Role of cooperatives in Fostering innovation, promoting start-Ups, and Technology Upgradation.

ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷರು ಶಾಸಕರಾದ ಶ್ರೀ ಡಿ.ಎಸ್. ಸುರೇಶ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ : 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಅಂಗವಾಗಿ ದಿನಾಂಕ 17.11.2022ರಂದು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಒಕ್ಕಲಿಗರ ಸಭಾ ಭವನದಲ್ಲಿ ಆಚರಿಸಬೇಕೆಂದು ಜಿಲ್ಲಾ ಬ್ಯಾಂಕು ಹಾಗೂ ಶಾಸಕ ಶ್ರೀ ಡಿ ಎಸ್ ಸುರೇಶರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಕಾರ್ಯಕ್ರಮವನ್ನು ದಿನಾಂಕ 19.10.2022 ರಂದು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್ ಟಿ ಸೋಮಶೇಖರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ತೀರ್ಮಾನದಂತೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕುಕ್ಕುಟ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಶ್ರೀ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳ ನಿ., ಇವರುಗಳ ಸಹಯೋಗದೊಂದಿಗೆ ಆಚರಿಸಲು ನಿರ್ಣಯಿಸಲಾಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಜಿ. ಎಸ್. ಮಹಾಬಲ್ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಡಿ. ಸಿ. ಲೋಕಪ್ಪಗೌಡ ಜಿಲ್ಲಾ ಸಹಕಾರಿ ಯೂನಿಯನ್ ಬ್ಯಾಂಕ್ ಮುಖ್ಯಕಾರ್ಯನಿವಾಹಣಾಧಿಕಾರಿ ಶ್ರೀ ಯಶಸ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಕಾರ್ಯಕ್ರಮದ ಸಂಯೋಜನಾಧಿಕಾರಿ ಶ್ರೀ ಪ್ರಸಾದ್‌ರೆಡ್ಡಿ, ಮೈಸೂರು ವಿಭಾಗದ ಜಂಟಿ ನಿಬಂಧಕರಾದ ಡಾ॥ ಉಮೇಶ್, ಜಿಲ್ಲೆಯ ಸಹಕಾರ ಇಲಾಖಾ ಅಧಿಕಾರಿಗಳು, ಅನೇಕ ಸಹಕಾರ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಅಧಿಕಾರಿಗಳು ಭಾಗವಹಿಸಿದ್ದರು. ಸಹಕಾರ ಸಪ್ತಾಹದ ಆಚರಣೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಲಾಯಿತು ಮತ್ತು ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸಹಕಾರದ ಎಲ್ಲಾ ವಿಭಾಗದ ಉತ್ತಮ ಸಹಕಾರ ಸಂಸ್ಥೆಗಳನ್ನು ಗುರುತಿಸಿ ಸನ್ಮಾನಿಸಬೇಕೆಂದು ತೀರ್ಮಾನಿಸಲಾಯಿತು. ಸಪ್ತಾಹದ ಅಂಗವಾಗಿ ಸಹಕಾರ ಜಾತ, ಮೆರವಣಿಗೆ, ವಸ್ತ್ರ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳು, ಮತ್ತು ಸಹಕಾರ ಧ್ವಜಾರೋಹಣ ಏರ್ಪಡಿಸಬೇಕೆಂದು ತೀರ್ಮಾನಿಸಲಾಯಿತು.

ಭೇಟಿ

ದಿನಾಂಕ 12.10.2022 ರಂದು ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ವಿಜಯ್ ಸಿ.ಪಿ ಇವರು ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಜಿಲ್ಲೆ ರವರ ಕಚೇರಿಗೆ ಸಾಮಾನ್ಯ ಭೇಟಿ ನೀಡಿ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ವಿಚಾರವಾಗಿ ಸಹಕಾರಿಗಳ ಉಪನಿಬಂಧಕರಾದ ಶ್ರೀ ಎನ್. ವೆಂಕಟೇಶ್ ಇವರೊಂದಿಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ತಿಪಟೂರು ಉಪವಿಭಾಗದ ಸಹಾಯಕ ನಿಬಂಧಕರಾದ ಶ್ರೀ ದಿಲೀಪ್ ಕುಮಾರ್ ರವರು, ಉಪನಿಬಂಧಕರ ಕಛೇರಿ ಸಿಬ್ಬಂದಿ ವರ್ಗದವರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 11.10.2022 ರಂದು ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ವಿಜಯ್ ಸಿ.ಪಿ ರವರು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಕಚೇರಿಗೆ ಭೇಟಿ ನೀಡಿ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ವಿಚಾರವಾಗಿ ಸಹಾಯಕ ನಿಬಂಧಕರಾದ ಶ್ರೀ ಡಾ. ಚಂದ್ರಶೇಖರ್ ರವರೊಂದಿಗೆ ಚರ್ಚೆ ನಡೆಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 17.11.2022 ರಂದು ಚಿಕ್ಕಮಗಳೂರಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಸಹಕಾರ ಸಪ್ತಾಹ ಆಚರಣೆ

ಧ್ಯೇಯ : ಭಾರತ@75 : ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯ

Theme : India@75 : Growth of Cooperatives and Future Ahead

ಸಪ್ತಾಹದ 7 ದಿನಗಳ ವಿವರಗಳು :

ದಿನಾಂಕ	ಸಹಕಾರ ಸಪ್ತಾಹದ ದಿನ	ಆಚರಣೆಯ ಸ್ಥಳ
14.11.2022	ಸಹಕಾರ ಸಂಸ್ಥೆಗಳ ವ್ಯಾಪಾರ ಸರಳೀಕರಣ ರಫ್ತು ವೃದ್ಧಿಗಾಗಿ ಜೆಮ್–ಪೋರ್ಟಲ್ ಬಳಕೆ / Ease-do-doing Business for cooperatives, GeM, and export Promotion	ಕಲಬುರಗಿ
15.11.2022	ಸಹಕಾರ ಮಾರುಕಟ್ಟೆ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ / Cooperative Marketing, consumers, processing and value addition	ಧಾರವಾಡ
16.11.2022	ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರಲು ಪುನರ್ ನಿರ್ಮಿಸುವುದು / Mainstreaming cooperative education, professional management, and Re-orienting training.	ಬೆಳಗಾವಿ
17.11.2022	ಆವಿಷ್ಕಾರ ಪೋಷಣೆ, ಸ್ಟಾರ್ಟ್ ಆಪ್‌ಗಳಿಗೆ ಉತ್ತೇಜನ ಮತ್ತು ತಂತ್ರಜ್ಞಾನದ ಉನ್ನತೀಕರಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ / Role of cooperatives in Fostering innovation, promoting start-Ups, and Technology Upgradation.	ಚಿಕ್ಕಮಗಳೂರು
18.11.2022	ಉದ್ಯಮಶೀಲತೆ ಅಭಿವೃದ್ಧಿ, ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಸಹಕಾರಿ ಸಹಭಾಗಿತ್ವ ಬಲಗೊಳಿಸುವುದು/ Entrepreneurship Development and strengthening public-private cooperative partnership	ಮಂಗಳೂರು
19.11.2022	ಯುವಕರು, ಮಹಿಳೆ, ಅಬಲವರ್ಗ ಮತ್ತು ಆರೋಗ್ಯಕ್ಕಾಗಿ ಸಹಕಾರಿ ಸಂಸ್ಥೆಗಳು / Cooperatives for youth, women, weaker sections and Health	ಬೆಂಗಳೂರು
20.11.2022	ಆರ್ಥಿಕ ಸೇರ್ಪಡೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಡಿಜಟಲೀಕರಣ ಮತ್ತು ಸಹಕಾರ ಸಂಸ್ಥೆಗಳ ದತ್ತಾಂಶವನ್ನು ಬಲಪಡಿಸುವುದು /Finanical inclusion, Digitalization Of PACS and strengthening cooperative Database.	ಮೈಸೂರು

ದಿನಾಂಕ 17.11.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯನ್ನು ಜಿಲ್ಲಾ ಒಕ್ಕಲಿಗರ ಸಮುದಾಯ ಭವನ, ವಿಜಯಪುರ ಬಡಾವಣೆ, ಚಿಕ್ಕಮಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.

ಯಶಸ್ವಿನಿ ಯೋಜನೆ ಸುತ್ತೋಲೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

www.souharda.coop, Ph: 080-23378375-80, E-mail: souharda@souharda.coop

ಸಂಖ್ಯೆ : ಸಂಸ/ಆವಿ/ಯಶಸ್ವಿನಿ–01/2022–23 ದಿನಾಂಕ: 03.11.2022

ಯಶಸ್ವಿನಿ ಯೋಜನೆ ಸುತ್ತೋಲೆ

ಇವರಿಗೆ :
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಗಳ ಸದಸ್ಯರನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ನೋಂದಾಯಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಸಿಒ 154 (1) ಸಿಎಲ್‌ಎಸ್ 2022, ದಿನಾಂಕ: 12.10.2022

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪರಿಷ್ಕರಿಸಿ ಸಹಕಾರ ಇಲಾಖೆಯ ಮೂಲಕ ಮರುಜಾರಿಗೊಳಿಸಿ ಅನುಷ್ಠಾನಗೊಳಿಸಲು ಉಲ್ಲೇಖದ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಮಾರ್ಗಸೂಚಿಯನ್ವಯ ಯಶಸ್ವಿನಿ ಯೋಜನೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಹಾಗೂ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002ರಡಿ ನೋಂದಾಯಿಸಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಅನ್ವಯಿಸುತ್ತದೆ.

ಯಶಸ್ವಿನಿ ಯೋಜನೆಯ ಅವಧಿ 01.01.2023 ರಿಂದ 31.12.2023 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯ ನೋಂದಣಿ ಪ್ರಕ್ರಿಯೆಯು ದಿನಾಂಕ:01.11.2022ರಿಂದ ಪ್ರಾರಂಭವಾಗಿದೆ. ಗ್ರಾಮೀಣ ಭಾಗದ ಸಹಕಾರಿ ಸಂಘದ/ಸೌಹಾರ್ದ ಸಹಕಾರಿಯ ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ರೂ.500/– ಮತ್ತು ಕುಟುಂಬದಲ್ಲಿ ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಪ್ರತೀ ಸದಸ್ಯನಿಗೆ ಹೆಚ್ಚುವರಿಯಾಗಿ ರೂ.100/– ವಂತಿಗೆ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ನಗರ ಸಹಕಾರ ಸಂಘಗಳ ಸದಸ್ಯರಿಗೆ ಸಂಬಂಧಿಸಿದಂತೆ ವಾರ್ಷಿಕ ವಂತಿಗೆ ರೂ.1000/– ಹಾಗೂ ನಾಲ್ಕಕ್ಕಿಂತ ಹೆಚ್ಚಿರುವ ಸದಸ್ಯನೊಬ್ಬನಿಗೆ ರೂ.200/– ವಂತಿಗೆ ನಿಗದಿಪಡಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುವುದರಿಂದ ಸದರಿ ಸದಸ್ಯರು ವಂತಿಗೆ ಪಾವತಿಸುವ ಅಗತ್ಯವಿರುವುದಿಲ್ಲ. ಈ ಯೋಜನೆಯ ಸದಸ್ಯರಾಗಲು ವಯೋಮಿತಿಯ ನಿರ್ಬಂಧವಿರುವುದಿಲ್ಲ. ಸಹಕಾರ ಸಂಸ್ಥೆಯ ಸದಸ್ಯರಾಗಿ ಕನಿಷ್ಠ ಮೂರು ತಿಂಗಳಾಗಿರಬೇಕು. ಕುಟುಂಬದ ಒಬ್ಬ ವ್ಯಕ್ತಿ ಸಹಕಾರಿ ಸಂಸ್ಥೆಯ ಸದಸ್ಯನಾಗಿದ್ದಲ್ಲಿ ಅವನ ಕುಟುಂಬದ ಎಲ್ಲ ಸದಸ್ಯರನ್ನು ಈ ಯೋಜನೆಯಡಿಯಲ್ಲಿ ನೋಂದಾಯಿಸಬಹುದಾಗಿದೆ.

ಯಶಸ್ವಿನಿ ಯೋಜನೆಯಡಿ ನೋಂದಾಯಿಸಿದ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಕಾರ್ಡ್‌ನ್ನು ಒದಗಿಸಲಾಗುತ್ತದೆ, ಸದರಿ ಕಾರ್ಡ್‌ನ್ನು ನೆಟ್‌ವರ್ಕ್ ಆಸ್ಪತ್ರಗಳಲ್ಲಿ ಬಳಸಿ ಸದಸ್ಯರು ನಗದು ರಹಿತ ಚಿಕಿತ್ಸೆಯನ್ನು ಗರಿಷ್ಠ ಐದು ಲಕ್ಷ ರೂಪಾಯಿಗಳ ಮಿತಿಯಲ್ಲಿ ಪಡೆಯಬಹುದಾಗಿದೆ. ಪ್ರತೀ ಕುಟುಂಬದ ಒಂದು ಕಾರ್ಡಿಗೆ ರೂ.10/–ನ್ನು ಸಾದಿಲ್ವಾರು ವೆಚ್ಚವಾಗಿ ಸಹಕಾರಿಯು ಪಡೆಯಬಹುದಾಗಿದೆ. ಸದಸ್ಯರ ನೋಂದಣಿ ಮಾರ್ಗಸೂಚಿಗಳು, ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ, ಶಸ್ತ್ರಚಿಕಿತ್ಸೆಗಳ ಪಟ್ಟಿ ಇವುಗಳ ಮಾಹಿತಿ ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟಿನಲ್ಲಿ (https://sahakarasindhu.karnataka.gov.in) ಅಪ್‌ಲೋಡ್ ಆಗಲಿದೆ, ಪ್ರಸ್ತುತ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿದೆ.

ಸೌಹಾರ್ದ ಸಹಕಾರಿ ಸಂಘಗಳು, ತಮ್ಮ ಸಹಕಾರಿಯ ಸದಸ್ಯರ ಕುಟುಂಬವನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ನೋಂದಾಯಿಸಿ, ಈ ಯೋಜನೆಯ ಪ್ರಯೋಜನವನ್ನು ಸದಸ್ಯರಿಗೆ ಒದಗಿಸುವ ಮೂಲಕ ಯಶಸ್ವಿನಿ ಯೋಜನೆಯನ್ನು ಯಶಸ್ವಿಗೊಳಿಸಲು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

Karnataka State Souharda Federal Co-operative Reg. No. RSR/SOU/ACT/136/ Regn. 851/2001-02 Dated 04-01-2002 Bengaluru

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

‘ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ’ಯ ಪರಿಚಯ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

– ಶ್ರೀ ರಘುನಂದನ ಕೆ, ಉಪಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಇತ್ತೀಚಿನ ದಿನಮಾನದಲ್ಲಿ ಜನ ಸಾಮಾನ್ಯರು ಆರೋಗ್ಯ ಕಾರಣಗಳಿಗಾಗಿ ಹಾಗೂ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚಗಳಿಂದಾಗಿ ಸ್ವಸ್ಥ ಜೀವನ ನಡೆಸಲು ಕಷ್ಟಪಡುತ್ತಿರುವ ಸಂದರ್ಭದಲ್ಲಿ ಹಲವು ಆರೋಗ್ಯ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶ್ರಮಿಸುತ್ತಿವೆ. ಇಂತಹ ಆರೋಗ್ಯ ಯೋಜನೆಗಳ ಆರಂಭಕ್ಕೆ ನಾಂದಿ ಹಾಡಿದ್ದು ಕರ್ನಾಟಕ ರಾಜ್ಯ. ಗ್ರಾಮೀಣ ಭಾಗದದಲ್ಲಿನ ರೈತರಲ್ಲಿ ಆರೋಗ್ಯ ರಕ್ಷಣೆಯ ಭರವಸೆಯನ್ನು ಮೂಡಿಸುವ ನಿಟ್ಟಿನಲ್ಲಿ, ರೈತರ ವೈದ್ಯಕೀಯ ವೆಚ್ಚವನ್ನು ತಾನು ಹಂಚಿಕೊಳ್ಳುವ ಮೂಲಕ ರೈತ ಕುಟುಂಬಗಳಿಗೆ ಆಸರೆಯಾಗುವ ಉದ್ದೇಶದಿಂದ 2003ರಲ್ಲಿ ಕರ್ನಾಟಕ ಸರ್ಕಾರ ದೇಶದ ಮೊಟ್ಟಮೊದಲ ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆಯಾದ “ಯಶಸ್ವಿನಿ ರೈತ ಆರೋಗ್ಯ ರಕ್ಷಣಾ ಯೋಜನೆ”ಯನ್ನು ಸಹಕಾರ ಇಲಾಖೆಯ ಮೂಲಕ ಜಾರಿಗೆ ತಂದಿತ್ತು. ಸದರಿ ಯೋಜನೆಯು 2017ರವರೆಗೆ ಯಶಸ್ವಿಯಾಗಿ ನಡೆದು ಬಡವರ ಪಾಲಿನ ಆರೋಗ್ಯ ಸಂಜೀವಿನಿ ಎಂದೇ ಪ್ರಸಿದ್ಧವಾಗಿತ್ತು. ಆದರೆ 2018 ರಲ್ಲಿ ರಾಜ್ಯದ ಎಲ್ಲರಿಗೂ ಸಾರ್ವತ್ರಿಕ ಆರೋಗ್ಯ ರಕ್ಷಣೆ ನೀಡಲು ಮುಂದಾದ ರಾಜ್ಯ ಸರ್ಕಾರ ‘ಆರೋಗ್ಯ ಕರ್ನಾಟಕ ಯೋಜನೆ’ಯನ್ನು ಅನುಷ್ಠಾನಗೊಳಿಸಿದ ನಂತರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ವಿಲೀನಗೊಳಿಸಿತ್ತು. 2016–17ನೇ ಸಾಲಿನಲ್ಲಿ 43 ಲಕ್ಷಕ್ಕೂ ಅಧಿಕ ಜನರು ಈ ಯೋಜನೆಯ ಸದಸ್ಯತ್ವ ಪಡೆದಿದ್ದು, 01.95 ಲಕ್ಷದಷ್ಟು ಶಸ್ತ್ರಚಿಕಿತ್ಸೆ ಹಾಗೂ 02.71 ಲಕ್ಷದಷ್ಟು ಹೊರರೋಗಿ ತಪಾಸಣೆಯ ವೆಚ್ಚ ಸೇರಿದಂತೆ 31,782 ಲಕ್ಷಗಳಷ್ಟು ವೆಚ್ಚವನ್ನು ಈ ಯೋಜನೆಯಡಿ ಭರಿಸಲಾಗಿತ್ತು.

ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಬೇಕೆಂದು ಗ್ರಾಮೀಣ ಬಾಗದಲ್ಲಿನ ರೈತರು, ಸಹಕಾರಿ ಸಂಘಗಳು ಹಾಗೂ ಸಹಕಾರಿ ಸಂಘಗಳ ಸದಸ್ಯರು ನಿರಂತರವಾಗಿ ರಾಜ್ಯ ಸರ್ಕಾರದ ಗಮನ ಸೆಳೆದಿದ್ದವು. ಇದಕ್ಕೆ ಸ್ಪಂದಿಸಿದ ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಲು ತೀರ್ಮಾನಿಸಿ 2022–23ನೇ ಸಾಲಿನ ಅಯವ್ಯಯದಲ್ಲಿ 300 ಕೋಟಿ ಅವಕಾಶ ಕಲ್ಪಿಸಿತ್ತು. ಅದರಂತೆ ಪ್ರಸ್ತುತ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪರಿಷ್ಕರಿಸಿ ಸಹಕಾರ ಇಲಾಖೆಯ ಮೂಲಕ ಮರುಜಾರಿಗೊಳಿಸಿ ಅನುಷ್ಠಾನಗೊಳಿಸಲು ದಿನಾಂಕ:12.10.2022ರಂದು ರಾಜ್ಯ ಸರ್ಕಾರ ಆದೇಶಿಸಿದೆ. 01.01.2023 ರಿಂದ 31.12.2023 ರವರೆಗಿನ ಅವಧಿಗೆ ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಣಿ ಪ್ರಕ್ರಿಯೆಯು ದಿನಾಂಕ: 01.11.2022ರಿಂದ ಸಹಕಾರ ಸಂಘಗಳ ಮೂಲಕ ಪ್ರಾರಂಭವಾಗಲಿದೆ.

ಯೋಜನೆಯ ಹಿನ್ನೆಲೆ : ನಿರಂತರವಾಗಿ ಏರುತ್ತಿರುವ ವೈದ್ಯಕೀಯ ಸೌಲಭ್ಯಗಳಿಂದಾಗಿ ಗ್ರಾಮೀಣ ಭಾಗದ ರೈತ ಕುಟುಂಬಗಳು ತಮ್ಮ ಆರೋಗ್ಯ ರಕ್ಷಣೆಗಾಗಿ ಅಧಿಕ ಮೊತ್ತದ ಹಣವನ್ನು ವ್ಯಯಿಸುತ್ತಿರುವುದನ್ನು ಗಮನಿಸಿದ ಕರ್ನಾಟಕ ರಾಜ್ಯ ಸರ್ಕಾರ, ರೈತರ ಆರೋಗ್ಯ ರಕ್ಷಣೆಯ ಜವಾಬ್ದಾರಿಯಲ್ಲಿ ಸರ್ಕಾರ ಭಾಗವಹಿಸುವ ಯೋಜನೆಯೊಂದನ್ನು ರೂಪಿಸುವ ಪ್ರಯತ್ನ ನಡೆಸಿತು. ನಾರಾಯಣ ಹೃದಯಾಲಯದ ಸಂಸ್ಥಾಪಕರಾದ ಡಾ.ದೇವಿಪ್ರಸಾದ್ ಶೆಟ್ಟಿಯವರ ಪರಿಕಲ್ಪನೆಯೊಂದಿಗೆ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಎ ರಾಮಸ್ವಾಮಿ ಇವರ ಆಸಕ್ತಿ, ಪ್ರಯತ್ನಗಳ ಫಲವಾಗಿ ಯೋಜನೆಯೊಂದು ರೂಪಗೊಂಡಿತು. ಸರ್ಕಾರದ ಅನೇಕ ರೈತಪರ ಯೋಜನೆಗಳನ್ನು ಸಮಾಜಕ್ಕೆ ತಲುಪಿಸುತ್ತಿರುವ ಸಹಕಾರ ಸಂಸ್ಥೆಗಳ ಮೂಲಕ “ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ” ಜಾರಿಗೆ ತರಲು ಉದ್ದೇಶಿಸಿ 14 ನವೆಂಬರ್ 2002ರಂದು ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್ ಎಂ ಕೃಷ್ಣ ಅವರಿಂದ ಈ ಯೋಜನೆ ಉದ್ಘಾಟಿಸಲ್ಪಟ್ಟು 01 ಜೂನ್ 2003 ರಿಂದ ಜಾರಿಗೆ ಬಂತು. ಸಹಕಾರ ಕ್ಷೇತ್ರದಲ್ಲಿನ ರೈತರ ಆರೋಗ್ಯದ ಕಾಳಜಿಯೊಂದಿಗೆ ‘ರೈತರ ಆರೋಗ್ಯ ನಾಡಿನ ಭಾಗ್ಯ’ ಎಂಬ ಘೋಷ ವಾಕ್ಯದೊಂದಿಗೆ ಪರಿಚಯಿಸಲ್ಪಟ್ಟ, ದೇಶದಲ್ಲೇ ಮಾದರಿಯಾದ ಸ್ವಯಂ ಹಣಕಾಸು ಪ್ರಾಯೋಜಕತ್ವದ ಯೋಜನೆ ಇದಾಗಿದೆ. 2017ರಲ್ಲಿ ಸ್ಥಗಿತವಾಗಿದ್ದ ಈ ಯೋಜನೆ ಬಹು ಬೇಡಿಕೆಯಿಂದಾಗಿ ಹಾಗೂ ಸಹಕಾರ ಮಂತ್ರಿಗಳಾದ ಶ್ರೀ ಎಸ್ ಟಿ ಸೋಮಶೇಖರ್‌ರವರ ಕಾಳಜಿಯ ಕಾರಣದಿಂದಾಗಿ ಮರುಜಾರಿಗೊಳ್ಳುತ್ತಿದೆ.

ಯೋಜನೆಯ ಅನುಷ್ಠಾನ : ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು 'ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ನಡೆಸಲಾಗುತ್ತಿತ್ತು. ಈ ಯೋಜನೆಯಡಿಯಲ್ಲಿ ಆಸ್ಪತ್ರೆಗಳ ಸಂಪರ್ಕ ಜಾಲ ಸಿದ್ಧಪಡಿಸುವುದು, ಶಸ್ತ್ರಚಿಕಿತ್ಸೆಗಳ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಯತ್ನಿಸುವುದು, ಆಸ್ಪತ್ರೆಗಳಿಗೆ ಮಾರ್ಗದರ್ಶಿ ಶಿಷ್ಟಾಚಾರಗಳನ್ನು ರಚಿಸಿ ಅದರ ಪಾಲನೆಯ ಬಗ್ಗೆ ಗಮನಹರಿಸುವುದು ಸೇರಿದಂತೆ ಯೋಜನೆಯ ಹಣಕಾಸು ನಿಧಿಯ ನಿರ್ವಹಣೆಯನ್ನು ಈ ಟ್ರಸ್ಟ್ ನಡೆಸುತ್ತಿತ್ತು. ಪ್ರಸ್ತುತ ಕೂಡ ಸಹಕಾರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 'ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ರಚಿಸಲಾಗಿದೆ. ಹಾಗೂ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಸಹಕಾರ ಇಲಾಖೆಗೆ ನೀಡಲಾಗಿದೆ.

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಪರಿಚಯ :

- ಗ್ರಾಮೀಣ ಸಹಕಾರ ಸಂಘಗಳ/ಸ್ವಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ರೂ.500/– ಮತ್ತು ಕುಟುಂಬದಲ್ಲಿ ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಪ್ರತೀ ಸದಸ್ಯನಿಗೆ ಹೆಚ್ಚುವರಿಯಾಗಿ ರೂ.100/– ವಂತಿಗೆ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ನಗರ ಸಹಕಾರ ಸಂಘಗಳ ಸದಸ್ಯರಿಗೆ ಸಂಬಂಧಿಸಿದಂತೆ ವಾರ್ಷಿಕ ವಂತಿಗೆ ರೂ.1000/– ಹಾಗೂ ನಾಲ್ಕಕ್ಕಿಂತ ಹೆಚ್ಚಿರುವ ಸದಸ್ಯನೊಬ್ಬನಿಗೆ ರೂ.200/– ವಂತಿಗೆ ನಿಗದಿಪಡಿಸಲಾಗಿದೆ.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ. ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

- ಈ ಯೋಜನೆಯಡಿಯಲ್ಲಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿಯನ್ನು ಐದು ಲಕ್ಷ ರೂಪಾಯಿಗಳೆಂದು ನಿಗದಿಪಡಿಸಿದೆ. ಯಶಸ್ವಿನಿ ಟ್ರಸ್ಟ್‌ನಿಂದ ಅಂಗೀಕೃತ ರಾಜ್ಯದ ಯಾವುದೇ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಐದು ಲಕ್ಷದ ಮಿತಿಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ. ಅಲ್ಲದೆ, ಹೊರರೋಗಿ ಚಿಕಿತ್ಸೆಗೆ ಮೂರು ತಿಂಗಳ ಅವಧಿಗೆ ಗರಿಷ್ಠ ರೂ.200/– ಮಿತಿ ನಿಗದಿಪಡಿಸಲಾಗಿದ್ದು, ಇದರಲ್ಲಿ ರೂ.100/–ನ್ನು ಯಶಸ್ವಿನಿ ಟ್ರಸ್ಟ್‌ನಿಂದ ಪಾವತಿಸಲಾಗುತ್ತದೆ.

- ಯೋಜನೆಯಲ್ಲಿ ಮೂಳೆ, ನೇತ್ರ, ಉದರ, ಕಿವಿ, ನರ, ಹೃದಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಸುಮಾರು 1650 ಖಾಯಿಲೆಗಳಿಗೆ ಚಿಕಿತ್ಸೆಯನ್ನು ಪ್ರಸ್ತುತ ಅಳವಡಿಸಿಕೊಳ್ಳಲಾಗಿದೆ.

ಸಹಕಾರಿಯ ಸದಸ್ಯರು ಈ ಯೋಜನೆಯ ಸೌಲಭ್ಯ ಪಡೆಯುವುದು ಹೇಗೆ? :

- ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002ರ ಅಡಿ ನೋಂದಾಯಿಸಿರುವ ಕಾರ್ಯನಿರತ ಸಹಕಾರ ಸಂಸ್ಥೆಯಲ್ಲಿ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವ ಸಹಾಯ ಗುಂಪುಗಳ ಸದಸ್ಯರು ಹಾಗೂ ಸದಸ್ಯರ ಕುಟುಂಬದವರು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

- ಈ ಯೋಜನೆಯ ಸದಸ್ಯರಾಗಲು ವಯೋಮಿತಿಯ ನಿರ್ಬಂಧವಿರುವುದಿಲ್ಲ. ಸಹಕಾರ ಸಂಸ್ಥೆಯ ಸದಸ್ಯರಾಗಿ ಕನಿಷ್ಠ ಮೂರು ತಿಂಗಳಾಗಿರಬೇಕು. ಕುಟುಂಬದ ಎಲ್ಲ ಸದಸ್ಯರು ಸಹಕಾರ ಸಂಸ್ಥೆಯ ಸದಸ್ಯರಾಗಿರಬೇಕಿಲ್ಲ, ಕುಟುಂಬದ ಒಬ್ಬ ವ್ಯಕ್ತಿ ಸಹಕಾರ ಸಂಸ್ಥೆಯ ಸದಸ್ಯನಾಗಿದ್ದರೆ, ಕುಟುಂಬದ ಎಲ್ಲ ವ್ಯಕ್ತಿಗಳನ್ನು ಈ ಯೋಜನೆಯಡಿ ನೋಂದಾಯಿಸಬಹುದು.

- ಈ ಯೋಜನೆಯಡಿ ನೋಂದಾಯಿಸುವವರು ವಂತಿಗೆ ಹಣವನ್ನು, ಸದಸ್ಯತ್ವ ಪಡೆಯುತ್ತಿರುವವರ ಭಾವಚಿತ್ರ, ಕುಟುಂಬದ ಸದಸ್ಯರ ವಿವರಗಳನ್ನು ತಾವು ಸದಸ್ಯರಾಗಿರುವ ಸಹಕಾರ ಸಂಸ್ಥೆಗೆ ಒದಗಿಸಬೇಕಾಗುತ್ತದೆ, ನೋಂದಣಿಯಾದ ಬಗ್ಗೆ ಸಹಕಾರ ಸಂಸ್ಥೆಯಿಂದ ಯೂನಿಕ್ ಐಡಿ ಸಂಖ್ಯೆ ಹೊಂದಿರುವ ಕಾರ್ಡ್ ನೀಡಲಾಗುತ್ತದೆ.

- ಯಶಸ್ವಿನಿ ಯೋಜನೆ ಅನ್ವಯವಾಗುವ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆಗಾಗಿ ಅಥವಾ ಹೊರ ರೋಗಿಯಾಗಿ ದಾಖಲಾಗುವ ಸಂದರ್ಭದಲ್ಲಿ ಯಶಸ್ವಿನಿ ಯೋಜನೆಯಡಿ ನೋಂದಣಿಯಾಗಿರುವ ಕಾರ್ಡ್‌ನ್ನು ಹಾಜರುಪಡಿಸುವ ಮೂಲಕ ನಗದು ರಹಿತ/ನಗದು ರಿಯಾಯಿತಿ ಚಿಕಿತ್ಸೆಯನ್ನು ಪಡೆಯಬಹುದು.

- ಸರ್ಕಾರಿ ನೌಕರರು, ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅಥವಾ ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯ ಹೊಂದಿರುವವರನ್ನು ಈ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸಲು ಅವಕಾಶವಿರುವುದಿಲ್ಲ.

ಸಹಕಾರ ಸಂಸ್ಥೆಗಳು ಏನು ಮಾಡಬೇಕು? :

- ಸಹಕಾರ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಸಹಕಾರ ಇಲಾಖೆಯ ಕಛೇರಿಯನ್ನು ಸಂಪರ್ಕಿಸಿ ಯಶಸ್ವಿನಿ ಯೋಜನೆಗೆ ಸದಸ್ಯರನ್ನು ನೋಂದಣಿ ಮಾಡಲು ಅಗತ್ಯವಾದ ಕಾರ್ಡ್/ಅರ್ಜಿ/ಪುಸ್ತಕಗಳನ್ನು ಪಡೆದುಕೊಳ್ಳಬೇಕು.

- ತಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದು ಮೂರು ತಿಂಗಳು ಕಳೆದಿರುವ ಸದಸ್ಯರು ಹಾಗೂ ಅವರ ಕುಟುಂಬದವರನ್ನು ಈ ಯೋಜನೆಗೆ ನಿಗದಿತ ವಂತಿಗೆ ಪಡೆಯುವ ಮೂಲಕ ನೋಂದಣಿ ಮಾಡಿಸಬೇಕು.

- ಸಾದಿಲ್ವಾರು ವೆಚ್ಚಕ್ಕಾಗಿ ಹಾಗೂ ಸದಸ್ಯರನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹ ಧನವಾಗಿ ಹತ್ತು ರೂಪಾಯಿಗಳು ಸಹಕಾರ ಸಂಸ್ಥೆಗೆ ನೋಂದಣಿಯಾಗುವ ಪ್ರತಿ ಕುಟುಂಬದ ಕಾರ್ಡಿಗೆ ದೊರೆಯುತ್ತದೆ.

- ಸಹಕಾರ ಸಂಸ್ಥೆಗಳು ಹತ್ತು ರೂಪಾಯಿಗಳನ್ನು ಇಟ್ಟುಕೊಂಡು ಉಳಿದಂತೆ ಸಂಗ್ರಹವಾದ ವಂತಿಗೆ ಹಣವನ್ನು ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿರುವ ಯಶಸ್ವಿನಿ ಖಾತೆಗೆ ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಜಮಾ ಮಾಡಿ, ರಶೀದಿಯನ್ನು ಸಂಬಂಧಿಸಿದ ಸಹಕಾರ ಇಲಾಖೆಯ ಕಛೇರಿಗೆ ಸಲ್ಲಿಸಬೇಕು.

- ಈ ಯೋಜನೆಗೆ ನೋಂದಣಿಯ ಸಂದರ್ಭದಲ್ಲಿ, ಸಹಕಾರ ಇಲಾಖೆಯಿಂದ ಪಡೆದ ಅರ್ಜಿ ನಮೂನೆಯಲ್ಲಿ ಸದಸ್ಯರ ವಿವರಗಳನ್ನು ಭರ್ತಿ ಮಾಡಿಸಿ ಫೋಟೊ ಅಂಟಿಸಬೇಕು ಹಾಗೂ ಆಧಾರ ಸಂಖ್ಯೆಯನ್ನು ನಮೂದಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಸಹಕಾರ ಇಲಾಖೆಯ ಕಛೇರಿಗೆ ಕಳುಹಿಸಬೇಕು.

- ಪ್ರಸ್ತುತ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟಿನಲ್ಲಿ https://sahakarasindhu.karnataka.gov.in ನಲ್ಲಿ ಲಭ್ಯವಿದೆ. ಸದಸ್ಯರ ನೋಂದಣಿ ಮಾರ್ಗಸೂಚಿಗಳು, ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ, ಶಸ್ತ್ರಚಿಕಿತ್ಸೆಗಳ ಪಟ್ಟಿ ಇವುಗಳ ಮಾಹಿತಿ ಇದೇ ವೆಬ್‌ಸೈಟ್‌ಗೆ ಅಪ್‌ಲೋಡ್ ಆಗಲಿದೆ.

ಸಮಾಜದ ಹಾಗೂ ಸಹಕಾರಿಯ ಸದಸ್ಯರ ಕುಟುಂಬದ ಆರೋಗ್ಯದ ದೃಷ್ಟಿಯಿಂದ ಸಹಕಾರ ಕ್ಷೇತ್ರವು ಸಾಮಾಜಿಕ ಬದ್ಧತೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅವಶ್ಯಕತೆಯಿದೆ. ಈ ಹಿಂದೆ ರಾಜ್ಯದ ಕೆಲವು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಯಶಸ್ವಿನಿ ಯೋಜನೆಯ ವಂತಿಗೆಯಲ್ಲಿ ಭಾಗಶಃ ಹಣವನ್ನು ಸಂಸ್ಥೆಯಿಂದಲೇ ಭರಿಸುವ ಮೂಲಕ ಸದಸ್ಯರ ಆರೋಗ್ಯ ರಕ್ಷಣೆಯ ಕುರಿತು ತಮ್ಮ ಕಾಳಜಿಯನ್ನು ತೋರ್ಪಡಿಸಿದ ಉದಾಹರಣೆಗಳಿವೆ. ಸಹಕಾರಿಯ ಸದಸ್ಯರ ಹಾಗೂ ಸದಸ್ಯರ ಕುಟುಂಬದ ಆರೋಗ್ಯದ ದೃಷ್ಟಿಯಿಂದ ರಾಜ್ಯ ಸರ್ಕಾರದ ಮಾದರೀ ಹಾಗೂ ಜನಪ್ರಿಯ ಯೋಜನೆಯಾದ 'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ'ಯನ್ನು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖರಾಗುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕಿದೆ.

ಪೋರ್ಟಲ್ ಜಿ.ಇ.ಎಮ್ : ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಉತ್ತಮ ಅವಕಾಶ

Opportunities to cooperatives in Portal Government – E- Marketing

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಆರಂಭವಾದ ನಂತರ ಸಹಕಾರ ಕ್ಷೇತ್ರದಲ್ಲಿ ಅಭಿವೃದ್ಧಿಯು ತೀವ್ರಗತಿಯಲ್ಲಿ ಸಾಗುವುದರ ಜೊತೆಗೆ ನಾವಿನ್ಯತೆಯೊಂದಿಗೆ ವೇಗವನ್ನೂ ಪಡೆದುಕೊಂಡಿದೆ. ಭಾರತ ಸರಕಾರ ಹಾಗೂ ರಾಷ್ಟ್ರೀಯ ಸಹಕಾರ ಯೂನಿಯನ್ ಜಂಟಿ ಆಶ್ರಯದಲ್ಲಿ ಈ ಪೋರ್ಟಲ್ ಜಿಇಎಮ್ ಅನ್ನು 9ನೇ ಆಗಸ್ಟ್ 2022ರಂದು ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರದ ಮಾನ್ಯ ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮುಂದಿನ ದಿನಗಳಲ್ಲಿ ಭಾರತದ ಸಹಕಾರಿ ಕ್ಷೇತ್ರದಲ್ಲಿ ಇನ್ನಷ್ಟು ಹೆಚ್ಚಿನ ಅಭಿವೃದ್ಧಿಯ ಹಾಗೂ ಸಹಕಾರಿ ಸಂಸ್ಥೆಗಳು ಶಕ್ತಿಶಾಲಿಯಾಗುವುದರ ಬಗ್ಗೆ ಭರವಸೆಯನ್ನು ಹೊಂದಿರುವುದಾಗಿ ತಿಳಿಸಿದರು. ಎನ್‌ಸಿಯುಐ, ಈ ಯೋಜನೆಯಲ್ಲಿ ನೋಡಲ್ ಏಜೆನ್ಸಿಯಾಗಿದ್ದು, ಜಿಇಮ್ ಪೋರ್ಟಲ್‌ನೊಂದಿಗೆ ಹೆಚ್ಚು ಹೆಚ್ಚು ಕೋ–ಆಪರೇಟಿವ್‌ಗಳು ನೊಂದಾಯಿಸಿಕೊಳ್ಳುವ ಸಲುವಾಗಿ ಸಹಯೋಗವನ್ನು ನೀಡಿದೆ.

ಜಿಇಎಮ್ ಪೋರ್ಟಲ್ ಇದು ಆನ್‌ಲೈನ್ ಖರೀದಿ ಮತ್ತು ಮಾರಾಟ ವ್ಯವಸ್ಥೆಯನ್ನು ಹೊಂದಿರುವ ಸರ್ಕಾರದಿಂದ ಪ್ರಾಯೋಜಿತ ಆನ್‌ಲೈನ್ ಮಾರುಕಟ್ಟೆಯಾಗಿದ್ದು ಇದರಲ್ಲಿ ಸಹಕಾರ ಸಂಸ್ಥೆಗಳಿಗೆ ಕೂಡ ಅಗತ್ಯವಾಗುವ ಖರೀದಿ ವ್ಯವಹಾರವನ್ನು ನಡೆಸಲು ಅವಕಾಶವಿರುತ್ತದೆ. ಇದರ ಮೂಲಕ ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮೊದಲಿಗೆ ಸಹಕಾರ ಸಂಸ್ಥೆಗಳು ಜಿಇಎಮ್ ಪೋರ್ಟ್‌ಲ್‌ನಲ್ಲಿ ನೋಂದಣಿಯಾಗಬೇಕಾಗುತ್ತದೆ. ಆದರೆ, ಪ್ರಸ್ತುತ, ಜಿಇಮ್ ಪೋರ್ಟಲ್‌ಗೆ ನೋಂದಣಿ ಪ್ರಕ್ರಿಯೆಯಲ್ಲಿ ಮೊದಲ ಹಂತದಲ್ಲಿ 100 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ವಹಿವಾಟು/ ಠೇವಣಿ ಹೊಂದಿರುವ, ಇತ್ತೀಚಿನ ಲೆಕ್ಕಪರಿಶೋಧನೆಯಲ್ಲಿ ಎ ಗ್ರೇಡ್ ಪಡೆದಿರುವ ಸಹಕಾರ ಸಂಸ್ಥೆಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಮುಂದಿನ ದಿನಗಳಲ್ಲಿ ಈ ಸೇವೆಯನ್ನು ಎಲ್ಲ ಸಹಕಾರ ಸಂಸ್ಥೆಗಳಿಗೆ ವಿಸ್ತರಿಸುವ ಸಾಧ್ಯತೆಯಿದೆ. ಈ ಸೇವೆಯಿಂದಾಗಿ ಸಹಕಾರ ಸಂಸ್ಥೆಗಳಲಿ ನಡೆಯುವ ವ್ಯವಹಾರವು ಪಾರದರ್ಶಕವಾಗುವುದರಿಂದ ಸಹಕಾರ ಚಳುವಳಿಗೆ ಮತ್ತಷ್ಟು ಬಲವನ್ನು ನೀಡಿದಂತಾಗುತ್ತದೆ ಎಂದು ಭಾವಿಸಲಾಗಿದೆ.

ಕರ್ನಾಟಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಇವರ ಸಹಯೋಗದಲ್ಲಿ ಸಂಯುಕ್ತ ಸಹಕಾರಿಯ ಡಿ.ಸಿ.ಬಿ.ಎಮ್ ಕೋರ್ಸಿನಲ್ಲಿ ಯುವಕರಿಗೆ ಸಹಕಾರ ಕ್ಷೇತ್ರದ ಅಧ್ಯಯನಕ್ಕೆ ಅವಕಾಶದ ಹೊಸರೂಪದ ಚಿಂತನೆ ದೇಶದ ಆರ್ಥಿಕ ಸ್ವಾವಲಂಬನೆಗೆ ಸಹಕಾರ ಕ್ಷೇತ್ರ ಅಡಿಪಾಯ

- ಡಾ. ವಿಷ್ಣುಕಾಂತ ಚಟಪಲ್ಲಿ, ಕುಲಪತಿಗಳು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ವಿಶ್ವವಿದ್ಯಾಲಯ, ಗದಗ.

ಗದಗ : ದಿನಾಂಕ 18-10-2022 ರಂದು ಗದಗಿನ ಕರ್ನಾಟಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಮುಖ್ಯಸ್ಥರ ಸಭೆ ಗದಗಿನಲ್ಲಿ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ನಡೆಯಿತು.

ಈ ಸಭೆಯಲ್ಲಿ ವಿಶ್ವ ವಿದ್ಯಾಲಯದ ಕುಲಪತಿಗಳಾದ ಶ್ರೀ ಡಾ. ವಿಷ್ಣುಕಾಂತ ಚಟಪಲ್ಲಿ ತರಬೇತಿ ಅಧಿಕಾರಿಗಳಾದ ಶ್ರೀ ಮುಲ್ಲಾ, ಶ್ರೀ ಚನ್ನಪ್ಪಗೌಡ ಸಹಕಾರ ವಿಭಾಗದ ಶ್ರೀ ಅಭಯ ಗಸ್ತಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ, ತರಬೇತಿ ಅಧಿಕಾರಿಗಳಾದ ಶ್ರೀ ವಿ.ಜೆ.ಕಾರಕೂನ ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ ಕೆ. ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಇವರುಗಳು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸ್ವಾಗತ ಮಾಡ ಸಭೆಯ ಉದ್ದೇಶವನ್ನು ವಿವರಿಸಿದರು ಮತ್ತು ಸಂಯುಕ್ತ ಸಹಕಾರಿಯ ಸಮಗ್ರ ಕಾರ್ಯಚಟುವಟಿಕೆಗಳ ವರದಿಯನ್ನು ಮಾನ್ಯ ಕುಲಪತಿಗಳಿಗೆ ಒಪ್ಪಿಸಿದರು. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಅತ್ಯಂತ ಉತ್ತಮವಾಗಿ ಮತ್ತು ಪರಿಣಾಮಕಾರಿಯಾಗಿ ಜರುಗುತ್ತಿವೆ. ಪ್ರಸಕ್ತ ನಮ್ಮ ತರಬೇತಿ ಹಾಗೂ ಶಿಕ್ಷಣ ಕಾರ್ಯಕ್ರಮಗಳನ್ನು ಸೌಹಾರ್ದ ಸಹಕಾರಿಗಳ ಸದಸ್ಯರಿಗೆ, ನಿರ್ದೇಶಕರುಗಳಿಗೆ, ಅಧ್ಯಕ್ಷರುಗಳಿಗೆ ಸಿಬ್ಬಂದಿಯವರಿಗೆ ಮಾಡಲಾಗುತ್ತಿದೆ. ಯುವಕರನ್ನು ಈ ಕ್ಷೇತ್ರದ ವ್ಯಾಪ್ತಿಗೆ ಕರೆತರುವುದಕ್ಕಾಗಿ ಪ್ರಯತ್ನ ಮಾಡಲಾಗುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ ಯುವಕರಿಗಾಗಿ ಸಹಕಾರ ಕುರಿತು ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಸಂಯುಕ್ತ ಸಹಕಾರಿಯ ಶಾಸನ ಬದ್ಧ ಕಾರ್ಯಚಟುವಟಿಕೆಗಳ ಜೊತೆಗೆ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿಯೂ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಂಯುಕ್ತ ಸಹಕಾರಿಯ ವತಿಯಿಂದ ಪ್ರಸ್ತುತ ಡಿ.ಸಿ.ಬಿ.ಎಮ್ ಕೋರ್ಸ್‌ನ್ನು ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ನಡೆಸಲಾಗುತ್ತಿದೆ. 2019 ರಿಂದ ಪ್ರತಿ ವರ್ಷಕ್ಕೆ ಒಂದು ತಂಡದಂತೆ ಈಗಾಗಲೇ 4 ತಂಡಗಳಲ್ಲಿ ಕೋರ್ಸ್‌ನ್ನು ಯಶಸ್ವಿಯಾಗಿ ನಡೆಸಲಾಗಿದೆ. 1381 ಅಭ್ಯರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಈಗ 5 ನೇ ತಂಡ ಜನವರಿ 2023 ರಂದು ಪ್ರಾರಂಭಿಸಲಾಗುತ್ತಿದೆ. ಈ ಹಂತದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಯುವಕರನ್ನು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಈ ಡಿ.ಸಿ.ಬಿ.ಎಮ್ ಕೋರ್ಸಿಗೆ ವಿಶ್ವವಿದ್ಯಾಲಯದ ಸಂಯೋಗದಲ್ಲಿ ನಡೆಸಿದರೆ ಯುವಕರು ಆಕರ್ಷಿತರಾಗಬಹುದು ಈ ಕೋರ್ಸಿಗೂ ಒಂದು ಹೆಚ್ಚಿನ ಮೌಲ್ಯ ಸಿಗಬಹುದು ಎಂದು ಚಿಂತನೆ ಮಾಡಿ ಈ ವಿಶ್ವವಿದ್ಯಾಲಯದ ಸಹಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಹ ಮಾತನಾಡಿ ವ್ಯವಸ್ಥಾಪಕ ನಿರ್ದೇಶಕರ ಪ್ರಾಸ್ತಾವಿತ ವಿಷಯಗಳನ್ನು ಅನುಮೋದಿಸಿರು.

ನಂತರ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ಮಾತನಾಡುತ್ತ ಸಹಕಾರ ಕ್ಷೇತ್ರ ನಮ್ಮ ದೇಶ ಆರ್ಥಿಕ ಸ್ವಾವಲಂಬನೆಗೆ ಸಹಕಾರ ಕ್ಷೇತ್ರ ಅಡಿಪಾಯವಾಗಿದೆ. ವಿಶೇಷವಾಗಿ ಗ್ರಾಮೀಣ ಕ್ಷೇತ್ರದಲ್ಲಿ ಸಹಕಾರ ಕ್ಷೇತ್ರ ಸದೃಡವಾಗಿ ಬೆಳೆಯಬೇಕು. ವಿಶ್ವವಿದ್ಯಾಲಯಗಳು ಗ್ರಾಮೀಣ ಹಾಗೂ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಶ್ರೀಯುತರು ಸಹಕಾರದ ವಿಷಯದಲ್ಲಿ ಸರಕಾರದ ಹಿಡಿತ ಕಡಿಮೆ ಇರಬೇಕು ಆದರೆ ಬಿಗಿಯಾಗಿರಬೇಕು ಎಂದು ತಿಳಿಸುತ್ತ ಸಂಯುಕ್ತ ಸಹಕಾರಿಯ ಬಗ್ಗೆ ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ತಾವು ತಿಳಿದುಕೊಂಡಿರುವ ವಿಷಯಗಳನ್ನೆಲ್ಲ ಪ್ರಸ್ತಾಪಿಸಿ

ವಿಶ್ವವಿದ್ಯಾಲಯ ಸಂಯುಕ್ತ ಸಹಕಾರಿಯ ಪ್ರಸ್ತಾವನೆಯನ್ನು ಸಕಾರಾತ್ಮಕವಾಗಿ ಸ್ಪಂದಿಸುತ್ತದೆ. ತಾತ್ವಿಕವಾಗಿ ನಾವು ನಿಮ್ಮ ಪ್ರಸ್ತಾವನೆಯನ್ನು ಒಪ್ಪಿರುತ್ತೇವೆ. ಯು.ಜಿ.ಸಿ. ನಿಯಮಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಬೋರ್ಡ್ ಆಫ್ ಸ್ಟಡೀಸ್ ಮತ್ತು ಬೋರ್ಡ್ ಆಫ್ ಎಕ್ಸಾಮಿನೇಶನ್ಸ್ ಇವರುಗಳ ಸಭೆಯಲ್ಲಿ ಮಂಡಿಸಿ ಅಂತಿಮವಾಗಿ ಸಿಂಡಿಕೇಟ್ ಅನುಮೋದನೆ ಪಡೆದು ವಿಶ್ವವಿದ್ಯಾಲಯದ ಪಾತ್ರ ಹಾಗೂ ಸಂಯುಕ್ತ ಸಹಕಾರಿಯ ಪಾತ್ರ ಇವುಗಳ ಬಗ್ಗೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ ನಂತರದಲ್ಲಿ ಇದು ಜಾರಿಗೆ ಬರುತ್ತದೆ ಎಂದು ತಿಳಿಸಿದರು. ನಂತರ ಸುದೀರ್ಘವಾಗಿ ಚರ್ಚೆಯ ನಂತರ ಕಾಮರ್ಸ ವಿಭಾಗದ ಮುಖ್ಯಸ್ಥ ಶ್ರೀ ಅಭಯ ಗಸ್ತಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವಸೂಲಾತಿ ಅಧಿಕಾರಿಗಳಿಗಾಗಿ ಸಾಲ ವಸೂಲಾತಿ ಕ್ರಮಗಳ ಕುರಿತು ತರಬೇತಿ ಕಾರ್ಯಕ್ರಮ

ಬೆಳಗಾವಿ : ದಿನಾಂಕ 17 ಅಕ್ಟೋಬರ್ 2022 ರಂದು ಕ. ರಾ.ಸೌ.ಸಂ.ಸ.ನಿ., ಬೆಂಗಳೂರು ಇದರ ಬೆಳಗಾವಿ ಪ್ರಾಂತದ ತರಬೇತಿ ಸಭಾಭವನ, ಬೆಳಗಾವಿ ಇಲ್ಲಿ ಬೆಳಗಾವಿ ಪ್ರಾಂತದ ದಾವಾ ಪಂಚಾಯತ್ ನ್ಯಾಯಾಲಯದಲ್ಲಿ ಅವಾರ್ಡ ಪಡೆದುಕೊಂಡಿರುವ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಗಳು ಹಾಗೂ ವಸೂಲಾತಿ ಅಧಿಕಾರಿಗಳಿಗಾಗಿ ಸಾಲ ವಸೂಲಾತಿ ಕ್ರಮಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇವರು ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು(ನಿವೃತ್ತ) ಶ್ರೀ ಎಸ್.ಎಸ್, ಕಟಗೇರಿ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಕುರಿತು ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಬೆಳಗಾವಿ ವಿಭಾಗದ ದಾವಾ ಪಂಚಾಯತ್ ನ್ಯಾಯಾಲಯದ ಸಾಲ ವಸೂಲಾತಿ ಅಧಿಕಾರಿಗಳು ನಿಯಮ(441) ಇದರ ನೂತನವಾಗಿ ಹೆಚ್ಚುವರಿ ಪ್ರಭಾರ ವಹಿಸಿಕೊಂಡಿರುವ ಶ್ರೀ ರವೀಂದ್ರ ಪಾಟೀಲ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರಿಗೆ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಬೆಳಗಿನ ಅವಧಿಯ ವಿಷಯವಾದ ಸಾಲ ವಸೂಲಾತಿ ಕ್ರಮಗಳ ಕುರಿತು ಹಾಗೂ ಮಧ್ಯಾಹ್ನದ ಅವಧಿಯ ಸದರಿ ವಿಷಯದ ಪ್ರಾಯೋಗಿಕ ಸಮಸ್ಯೆಗಳ ಬಗ್ಗೆ ಹಾಗೂ ಇತರೆ ಸಾಲ ವಸೂಲಾತಿ ಸಮಯದಲ್ಲಿ ಆಗಬಹುದಾದ ಸಮಸ್ಯೆಗಳ ಪರಿಹಾರಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಎಸ್.ಕಟಗೇರಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ) ಇವರು ಉಪನ್ಯಾಸ ನೀಡಿದರು.

ಬೆಳಗಾವಿ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೊಳಾಪ್ಪೆ, ಶ್ರೀ ವೃಷಭನಾಥ ಪಿ, ಶ್ರೀ ರಾಚಯ್ಯಾ ಹಿರೇಮಠ, ಶ್ರೀ ಜವಾಹಾರ ಎಮ್, ಹಾಗೂ ಶ್ರೀ ಸುಜಯ ಬೆಳವಿ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ ಒಟ್ಟು 85 ಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ.॥ ರಾಜೇಂದ್ರ ಕೆ. ಇವರ ಅಧ್ಯಕ್ಷತೆಯಲ್ಲಿ ಸಭೆ

ಬೆಳಗಾವಿ : ದಿನಾಂಕ 21 ಅಕ್ಟೋಬರ್ 2022ರಂದು ದಿ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ಇಲ್ಲಿ ಮಾನ್ಯ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ॥ ರಾಜೇಂದ್ರ ಕೆ. ಇವರ ಅಧ್ಯಕ್ಷತೆಯಲ್ಲಿ ಮತ್ತು ಅಪರ ನಿಬಂಧಕರಾದ ಶ್ರೀ ಪ್ರಕಾಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು., ಬೆಳಗಾವಿ ಇವರ ಉಪಸ್ಥಿತಿಯಲ್ಲಿ ಬೆಳಗಾವಿ ಪ್ರಾಂತದ ಸಹಕಾರ ಇಲಾಖೆಯ ಸಭೆಯು ಜರುಗಿತು. ಸದರಿ ಸಭೆಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮತ್ತು ಅಂಕಿಅಂಶಗಳ ಕುರಿತು ಮಾಹಿತಿ ನೀಡಿದರು, ಈ ಸಂದರ್ಭದಲ್ಲಿ ಕಿರಿಯ ವ್ಯವಸ್ಥಾಪಕರಾದ ಶ್ರೀ ವೃಷಭನಾಥ ಪಿ ಹಾಗೂ ಬೆಳಗಾವಿ ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯಾ ಹಿರೇಮಠ ಇವರುಗಳು ಉಪಸ್ಥಿತರಿದ್ದರು.

ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಗುಣಮಟ್ಟದ ಸಾಲ ನಿರ್ವಹಣೆ ಮತ್ತು ಸಾಲ ವಸೂಲಾತಿ ಕ್ರಮಗಳು ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 13.10.2022 ಗುರುವಾರ ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮುಖ್ಯ ಅಥಿತಿಗಳಾಗಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಭಾಗವಹಿಸಿದ್ದರು. ಶ್ರೀ ಎಸ್.ಜಿ. ಜೋಶಿ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ), ಧಾರವಾಡ, ಇವರು ಗುಣಮಟ್ಟದ ಸಾಲ ನಿರ್ವಹಣೆ ಮತ್ತು ಸಾಲ ವಸೂಲಾತಿ ಕ್ರಮಗಳು ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 108 ಸೌಹಾರ್ದ ಸಹಕಾರಿಗಳಿಂದ 128 ಪ್ರತಿನಿಧಿಗಳು ಭಾಗವಹಿಸಿದ್ದರು.

ಚಿಕ್ಕಮಗಳೂರು : ದಿನಾಂಕ 18.10.2022 ರಂದು ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಎನ್.ಆರ್ ಪುರ, ಶೃಂಗೇರಿ ಮತ್ತು ಮೂಡಿಗೆರೆ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಒಂದು ದಿನದ ಕ್ಲಸ್ಟರ್ ಮಟ್ಟದ ವಿಷಯಾಧಾರಿತ ತರಬೇತಿ ಕಾರ್ಯಾಗಾರವನ್ನು ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಗಾರವನ್ನು ಶ್ರೀ ಶ್ರೀಧರ ಸೋಮಯಾಜಿ ರವರು ಉದ್ಘಾಟಿಸಿದರು. ಬೆಳಗಿನ ಅವಧಿಯಲ್ಲಿ ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ನಿರ್ವಹಿಸಬೇಕಾದ ದಾಖಲೆಗಳು ಹಾಗೂ ಅನುಸರಿಸಬೇಕಾದ ಕ್ರಮಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಶ್ರೀ ಸೂಮಯಾಜಿ ರವರು ಮಾಹಿತಿಯನ್ನು ಹಂಚಿಕೊಂಡರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಸಂಯುಕ್ತ ಸಹಕಾರಿಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾಹಿತಿಯನ್ನು ನೀಡಿದರು. ಸದರಿ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 32 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ನೆರವೇರಿಸಿದರು.

ದಿನಾಂಕ 19.10.2022 ರಂದು ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ತರೀಕೆರೆ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಒಂದು ದಿನದ ಕ್ಲಸ್ಟರ್ ಮಟ್ಟದ ವಿಷಯಾಧಾರಿತ ತರಬೇತಿ ಕಾರ್ಯಾಗಾರವನ್ನು ಆಯೋಜನೆ ಮಾಡಲಾಗಿತ್ತು. ಬೆಳಗಿನ ಅವಧಿಯಲ್ಲಿ ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ನಿರ್ವಹಿಸಬೇಕಾದ ದಾಖಲೆಗಳು ಹಾಗೂ ಅನುಸರಿಸಬೇಕಾದ ಕ್ರಮಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಶ್ರೀ ಸೋಮಯಾಜಿ ರವರು ಮಾಹಿತಿಯನ್ನು ಹಂಚಿಕೊಂಡರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಮತ್ತು ಆರ್ಥಿಕ ಸಭಲತೆಯ ಮಾನದಂಡಗಳ ಕುರಿತು ಸಂಯುಕ್ತ ಸಹಕಾರಿಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾಹಿತಿಯನ್ನು ನೀಡಿದರು. ಸದರಿ ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 15 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ನೆರವೇರಿಸಿದರು.

ಕೊಪ್ಪಳ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ದಿನಾಂಕ 19.10.2022, ಬುಧವಾರದಂದು ಬೆಳಗ್ಗೆ 10:30 ಗಂಟೆಗೆ ಕೊಪ್ಪಳ ನಗರದ ಶ್ರೀ ವೀರಮಾಹೇಶ್ವರ ಕ್ಷೇಮಾಭಿವೃದ್ಧಿ ಸಂಘ, ಮರಿಸ್ವಾಮಿ ಬಡಾವಣೆ, ಕೊಪ್ಪಳದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ "ಸಹಕಾರಿಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಲಿಯ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರ ಪಾತ್ರ ಹಾಗೂ ಸಹಕಾರಿಯಲ್ಲಿ ಕಡತಗಳ ನಿರ್ವಹಣೆ" ಎಂಬ ವಿಷಯಗಳ ಕುರಿತು ಸೌಹಾರ್ದ ಸಹಕಾರಿಗಳಿಗೆ ತರಬೇತಿಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ ಜಿ ಕೇಸರಹಟ್ಟಿರವರು ವಹಿಸಿದರು. ಉದ್ಘಾಟಕರಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ. ಬಿ. ಪತ್ತಾರ, ಅತಿಥಿಗಳಾಗಿ ಒಕ್ಕೂಟದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ. ಎಲ್.ಹೆಚ್, ಒಕ್ಕೂಟದ ಮಾನ್ಯ ನಿರ್ದೇಶಕರುಗಳಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಶ್ರೀ ಪ್ರಾಣೇಶರಾವ ದೇಸಾಯಿ, ಶ್ರೀ ಶಶಿಧರ ಶೆಟ್ಟರ, ಶ್ರೀ ಯಲ್ಲಪ್ಪ ಬಸರಿಹಾಳ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್, ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶರಣಪ್ಪ ಹ್ಯಾಟಿ, ನಿವೃತ್ತ ನಬಾರ್ಡನ ಮಾನ್ಯ ವ್ಯವಸ್ಥಾಪಕರಾದ ಶ್ರೀ ವೈ.ವಿ.ಗುಂಡುರಾವ, ನಿವೃತ್ತ ಸಹಕಾರಿಗಳ ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಲಿಯಾಕತ್ ಅಲಿ ರವರು ಉಪಸ್ಥಿತರಿದ್ದರು.

ಮೊದಲನೇಯ ಅವಧಿಯಲ್ಲಿ "ಸಹಕಾರಿಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಲಿಯ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರ ಪಾತ್ರ" ಎಂಬ ವಿಷಯದ ಕುರಿತು ಶ್ರೀ ವೈ.ವಿ.ಗುಂಡುರಾವ್ ರವರು ಉಪನ್ಯಾಸವನ್ನು ನೆರವೇರಿಸಿದರು. ಮಧ್ಯಾಹ್ನದ ಅವಧಿಯಲ್ಲಿ "ಸಹಕಾರಿಯಲ್ಲಿ ಕಡತಗಳ ನಿರ್ವಹಣೆ ಎಂಬ ವಿಷಯದ ಕುರಿತು ಶ್ರೀ ಲಿಯಾಕತ್ ಅಲಿ ರವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಶ್ರೀ ಗವಿಸಿದ್ಧೇಶ್ವರ ಅರ್ಬನ್ ಕೋಆಪರೇಟಿವ ಬ್ಯಾಂಕಿನ ಅಧ್ಯಕ್ಷರು ಮತ್ತು ನಗರ ಸಭೆಯ ಸದಸ್ಯರಾದ ಶ್ರೀ ರಾಜಶೇಖರ ಆಡೂರರವರಿಗೆ ಹಾಗೂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ತೋಟಪ್ಪ ಕಾಮನೂರರವರಿಗೆ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಕಲಬುರಗಿ ಪ್ರಾಂತದಿಂದ ಇತ್ತೀಚಿಗೆ ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ನಾಗಲಿಂಗಪ್ಪ. ಬಿ. ಪತ್ತಾರ ರವರುಗಳಿಗೆ ಒಕ್ಕೂಟದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಒಟ್ಟು 210 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಕೊಪ್ಪಳ ಜಿಲ್ಲಾ ಸಂಯೋಜಕರಾದ ಶ್ರೀ ಪವನ ನೆರವೇರಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಸಮಾಲೋಚನೆ ಹಾಗೂ ಅವರಿಂದ ಅಭಿನಂದನೆ ಸ್ವೀಕರಿಸಿದರು.

ರಾಮನಗರ : ದಿನಾಂಕ 15.10.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅದ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಶ್ರೀ ನಿರ್ವಾಹಣೇಶ್ವರ ಹಿರಿಯ ವಿದ್ಯಾರ್ಥಿಗಳ ಹಾಗೂ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ,. ಕನಕಪುರ, ರಾಮನಗರ ಜಿಲ್ಲೆ, ಈ ಸಹಕಾರಿಗೆ ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಸಹಕಾರಿಯಿಂದ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್, ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ತುಮಕೂರು : ದಿನಾಂಕ 14.10.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ಸಿದ್ದಗಂಗಾ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ,. ತುಮಕೂರು ಸಹಕಾರಿಗೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾದರಯ್ಯ ಇವರನ್ನು ಭೇಟಿ ಮಾಡಿದರು. ಸಹಕಾರಿಯ ವತಿಯಿಂದ ಮಾನ್ಯ ನಿರ್ದೇಶಕರನ್ನು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಬೆಳಗಾವಿ : ದಿನಾಂಕ 17 ಅಕ್ಟೋಬರ್ 2022ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಬೆಳಗಾವಿ ಪ್ರಾಂತೀಯ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೆಳಗಾವಿ ಸ್ಥಳೀಯ ಸಹಕಾರಿಗಳಾದ ಶ್ರೀ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಹಾಗೂ ಶ್ರೀ ಚನ್ನಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಈ ಸಹಕಾರಿಗಳಿಗೆ ಭೇಟಿ ನೀಡಿ ಸದರಿ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲನೆಯನ್ನು ಮಾಡಿದರು ಹಾಗೂ ಅಗತ್ಯ ಮಾರ್ಗದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸನ್ಮಾನ ಮಾಡುವುದರ ಮೂಲಕ ಗೌರವಿಸಲಾಯಿತು.

ದಿನಾಂಕ 18 ಅಕ್ಟೋಬರ್ 2022ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಗದಗ ಜಿಲ್ಲೆಯ ಶಿವಸಂಗಮ ಸೌಹಾರ್ದ ಸಹಕಾರಿ ನಿ., ಗದಗ ಈ ಸಹಕಾರಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲನೆಯನ್ನು ಮಾಡುವುದರ ಜೊತೆಗೆ ಅಗತ್ಯ ಮಾರ್ಗದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ ಸಹಕಾರಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಉದ್ಘಾಟನೆ

ತುಮಕೂರು : ದಿನಾಂಕ 06.10.2022 ರಂದು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಧು ಸೌಹಾರ್ದ ಪತ್ತಿನ ಸಹಕಾರಿ ನಿ., ಮಧುಗಿರಿ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಜರುಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಕೆ.ಎನ್. ರಾಜಣ್ಣ, ಸಹಕಾರ ರತ್ನ ಪುರಸ್ಕೃತರು ಮತ್ತು ಅಧ್ಯಕ್ಷರು ಡಿ.ಸಿ.ಸಿ ಬ್ಯಾಂಕ್, ತುಮಕೂರು, ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪುಟ್ಟಯ್ಯ ನವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎನ್.ವೆಂಕಟೇಶ್ ರವರು, ಶ್ರೀ ಸಣ್ಣಪ್ಪಯ್ಯ, ಸಹಾಯಕ ನಿಬಂಧಕರು, ಮಧುಗಿರಿ ಉಪ ವಿಭಾಗ, ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್, ಹಾಗೂ ಶ್ರೀ ಉಮೇಶ್. ಎ.ಎಸ್. ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದ್ದರು.

ಉಡುಪಿ : ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿಯಮಿತ, ಉಡುಪಿ. ಇದರ ಆಶ್ರಯದಲ್ಲಿ ದಿನಾಂಕ 08-10-2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇದರ ಮೈಸೂರು ವಿಭಾಗದ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಮಂಜುನಾಥ ಎಸ್. ಕೆ. ಯವರಿಗೆ ಅಭಿನಂದನಾ ಸಮಾರಂಭವನ್ನು ತಿರುಮಲ ಕ್ರೂಸ್ ಸಂತೆಕಟ್ಟೆ ಕೊಡಿಬೆಂಗ್ರೆ ಇಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಯಾಗಿ ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕ್ ಲಿ. ಉಡುಪಿ ಅಧ್ಯಕ್ಷರಾದ ಶ್ರೀ ಯಶ್ ಪಾಲ್ ಎ. ಸುವರ್ಣ ಭಾಗವಹಿಸಿ ಅಭಿನಂದನೆ ಸಲ್ಲಿಸಿದರು. ಹಾಗೂ ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪಿ. ಜಗನ್ನಾಥ ಶೆಟ್ಟಿ ವಹಿಸಿದ್ದರು. ಕೋಟ ವಿವೇಕ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಸಂಜೀವ ಸಿ. ಗುಂಡ್ಮಿ ಅಭಿನಂದನಾ ಭಾಷಣ ನೆರವೇರಿಸಿದರು. ಸಮಾರಂಭದಲ್ಲಿ ಸಹಕಾರಿ ಮುಖಂಡರಾದ ಶ್ರೀ ಎಸ್. ರಾಜು ಪೂಜಾರಿ, ಶ್ರೀ ಎ. ಸುರೇಶ್ ರೈ, ಶ್ರೀ ಬೋಳ ಸದಾಶಿವ ಶೆಟ್ಟಿ, ಶ್ರೀ ಮೋಹನ ಉಪಾಧ್ಯಾಯ, ಶ್ರೀ ಪ್ರಮೋದ್ ಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಮೂಡಬಿದಿರೆ : ಶ್ರೀ ಪಂಚಶಕ್ತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ 2021-22 ಸಾಲಿನಲ್ಲಿ 13.02.569.48 ಲಾಭ ಹೊಂದಿದೆ. ಈ ಸಾಲಿನಲ್ಲಿ ಶೇ. 12 ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ. ಸದಸ್ಯರ ಮನೆ ರಿಪೇರಿಗೆ 5 ಲಕ್ಷ ರೂ ನೀಡಲಾಗುತ್ತಿತ್ತು. ಈ ವರ್ಷದಿಂದ ಗ್ರಾಹಕರಿಗೆ ಅತಿ ಕಡಿಮೆ ಬಡ್ಡಿ ದರದಲ್ಲಿ ಮನೆ ನಿರ್ಮಾಣಕ್ಕೆ 15 ಲಕ್ಷ ರೂ. ಸಾಲ ನೀಡುವುದಾಗಿ ಅಧ್ಯಕ್ಷ ರಂಜಿತ್ ಪೂಜಾರಿ ಘೋಷಿಸಿದರು.

ಸಮಾಜ ಮಂದಿರದಲ್ಲಿ ಭಾನುವಾರ ನಡೆದ ಸಂಘದ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಳೆದ 2 ವರ್ಷ ಕರೊನಾ ಸಂದರ್ಭದಲ್ಲಿ ಅಶಕ್ತ 27 ಕುಟುಂಬಗಳಿಗೆ ಸಹಕಾರಿ ವತಿಯಿಂದ ಸಹಾಯ ಹಸ್ತ ನೀಡಲಾಗಿದೆ ಎಂದರು.

ಶಿಕ್ಷಣ ನಿಧಿ ಮತ್ತು ವಾರ್ಷಿಕ ಶುಲ್ಕ ಸಲ್ಲಿಕೆ

ಬಾಗಲಕೋಟ : ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಜಮಖಂಡಿ ಸದರಿ ಸಹಕಾರಿಯ ಶಿಕ್ಷಣ ನಿಧಿ ಮತ್ತು ವಾರ್ಷಿಕ ಶುಲ್ಕದ ಚೆಕ್ ಅನ್ನು ಹುಕ್ಕೇರಿ ಜಿಲ್ಲಾ ಸಂಯೋಜಕರಾದ ಶ್ರೀ ವೃಷಭನಾಥ ಪರಪ್ಪನವರಿಗೆ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಲಿ ನಿರ್ದೇಶಕರಾದ ನಾಗಪ್ಪ ಜಿ. ಸನದಿ ಮತ್ತು ನೇಮಣ್ಣ ಜಿ. ಜಮಖಂಡಿ, ಮಹೇಶ್ ಎಸ್. ಮಠಪತಿ ಪ್ರಧಾನ ವ್ಯವಸ್ಥಾಪಕರು ಬಿ. ಏ .ಪಾಟೀಲ್, ಸಹಾಯಕ ಪ್ರಧಾನ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಕಲಬುರಗಿ : ದಿನಾಂಕ 06.10.2022ರಂದು ಕಲ್ಯಾಣ ಕರ್ನಾಟಕ ವಕೀಲರ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರಗಿ ಇದರ ಉದ್ಘಾಟನೆಯನ್ನು ಪ್ರಧಾನ ಜಿಲ್ಲಾ ಮತ್ತು ಗೌರಾವನ್ವಿತ ನ್ಯಾಯಾಧೀಶರಾದ ಶ್ರೀ ಕೆ. ಬಿ. ಪಾಟೀಲರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು. ಕಲಬುರಗಿ ಜಿಲ್ಲಾ ಸಂಯೋಜಕರಾದ ಓಂಕಾರ ಧರಣೆ ಹಾಗೂ ಕಲಬುರಗಿ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ರಾಜಕುಮಾರ ಕಡಗಂಚಿರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಅಂಬರಾಯ ಪಟ್ಟಣ–ಕರವರು ಅಧ್ಯಕ್ಷತೆಯನ್ನು ವಹಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿಶ್ವರಾಧ್ಯ ಇಜೇರಿರವರು, ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಕಲಬುರಗಿ : ದಿನಾಂಕ 22.10.2022ರಂದು ಸೂಪರ್ ಸೌಹಾರ್ದ ಸಹಕಾರಿ ಸಂಘ ನಿ., ಆಳಂದ ಇದರ ಉದ್ಘಾಟನೆಯನ್ನು ಸಹಕಾರ ಸಂಘಗಳ ಇಲಾಖೆಯ ಮಾನ್ಯ ಉಪ ನಿಬಂಧಕರಾದ ಶ್ರೀ ರವೀಂದ್ರ ಉದ್ಘಾಟಿಸಿದರು. ದಿವ್ಯ ಸಾನಿಧ್ಯ ಶ್ರೀ ಕರುಣೇಶ್ವರ ಸ್ವಾಮಿಜಿ ಅನುಭವ ಮಂಟಪ ಧುತ್ತರಗಾಂವ ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್, ಸಹಕಾರ ಅಭಿವೃದ್ಧಿ ಅಧಿಕಾರಗಳಾದ ಶ್ರೀ ಶಂಕರೆಪ್ಪಾ ಮಾಲಿಪಾಟೀಲ ಈ ಸಂರ್ದಭದಲ್ಲಿ ಸಹಕಾರಿಯ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಕೊಪ್ಪಳ : ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯ ಹೊಸಬಂಡಿ ಹರ್ಲಾಪೂರ ಶಾಖೆಯಲ್ಲಿ ಸದಸ್ಯರ ಅನುಕೂಲಕ್ಕಾಗಿ ನೂತನ ಇ–ಸ್ಟಾಂಪಿಂಗ್ ಸೇವೆಯನ್ನು ಪ್ರಾರಂಭಿಸಲಾಯಿತು. ಉದ್ಘಾಟನೆಯನ್ನು ಹೊಸಬಂಡಿ ಹರ್ಲಾಪೂರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಊರಿನ ಹಿರಿಯರಾದ ಶ್ರೀ ದೇವರಾಜಗೌಡ ಪಾಟೀಲ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಮತ್ತು ಆರ್.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಗದಗ : ಸ್ಥಳೀಯ ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರಲ್ಲಿ ಕಿತ್ತೂರ ಚನ್ನಮ್ಮಾಜಿಯ 199ನೇಯ ವಿಜಯೋತ್ಸವ ಹಾಗೂ 244ನೇಯ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಪಂಚಮಸಾಲಿ ಸಮಾಜ ಬಾಂಧವರೆಲ್ಲರೂ ದಿನಾಂಕ 22–10–2022 ಮಾನ್ಯ ವಿಧಾನ ಸಭೆಯ ಉಪ–ಸಭಾಧ್ಯಕ್ಷರಾದ (ಡೆಪ್ಯೂಟಿ ಸ್ಪೀಕರ್) ಆನಂದ ಚ. ಮಾಮನಿ ನಿಧನದ ನಿಮಿತ್ಯ) ಸಹಕಾರಿಯಲ್ಲಿ ಮೊದಲಿಗೆ ಮೌನಆಚರಿಸಲಾಯಿತು. ನಂತರ ಚನ್ನಮ್ಮಾಜಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಚನ್ನಾಜಿಯ ಕಾರ್ಯ ಸಾಹಸದ ಬಗ್ಗೆ ಗಣ್ಯ ವರ್ತಕರು, ಯುವಕರು, ಸಮಾಜದ ಮುಖಂಡರಾದ ಮಹೇಶ ಎಸ್. ಕರಮುಡಿ ಮಾತನಾಡಿದರು. ಬ್ರಿಟೀಷರ ವಿರುದ್ಧ ಜಯ ಸಾಧಿಸಿದ ಬಗ್ಗೆ ವಿವರವಾಗಿ ಸಮಾಜದ ಪ್ರತಿಯೊಬ್ಬರೂ ಮಾತನಾಡಿದರು. ಈ ವಿಜಯೋತ್ಸವ ಹಾಗೂ ಜಯಂತ್ಯೋತ್ಸವ ಕಾಲಕ್ಕೆ ಸಹಕಾರಿಯ ಮ್ಯಾನೇಜರರಾದ ಶ್ರೀ ಸಿ. ವಿ. ಪಾಟೀಲ, ಸಹಾಯಕರಾದ ಪರಪ್ಪ ವಿ. ಬಳಿಗೇರ, ಕಾನೂನು ಸಲಹೆಗಾರರಾದ ಶ್ರೀ ಈಶ್ವರ ಜೆ. ಶಿರೂರು, ಸದಸ್ಯರು ಮತ್ತು ಸಮಾಜ ಬಾಂಧವರಾದ ಹಾಗೂ ಹಿತೈಷಿಗಳಾದ ಶ್ರೀ ಸಂತೋಷ ಎಸ್. ಸಂಕಣ್ಣವರ, ಶ್ರೀ ಶೇಖಪ್ಪ ನಿ. ಹೊಟ್ಟಿ, ಶ್ರೀ ಸೋಮನಗೌಡ ಎಸ್. ಪಾಟೀಲ, ಶಿವು ಗುರಿಕಾರ, ಶರಣ ಬಿ. ನಾಗೂರು, ಶ್ರೀ ಶರಣಪ್ಪ ಷ. ಅಂಗಡಿ, ಶ್ರೀ ರಾಮು ಬಿ. ಚಿಕ್ಕಣ್ಣವರ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸರಳ ಹಾಗೂ ಸಾಂಕೇತಿಕವಾಗಿ ನೆರವೇರಿಸಲಾಯಿತು. ನಂತರ ಎಲ್ಲರೂ ಜಿಲ್ಲಾಡಳಿತ ಭವನದಲ್ಲಿ ಹಾಗೂ ಚನ್ನಮ್ಮ ಮೆರವಣಿಗೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ವಿನಂತಿಸಲಾಯಿತು.

ಕನ್ನಡ ರಾಜ್ಯೋತ್ಸವ ಆಚರಣೆ

ಕನ್ನಡದ ಕಂಪು ವಿಶ್ವದಲ್ಲಿ ಪಸರಿಸಲಿ – ಜ್ಯಾಂತೀಕರ್

ಬೀದರ : ಕನ್ನಡದ ಕಂಪು ವಿಶ್ವದಲ್ಲಿ ಪಸರಿಸಿದಾಗ ಮಾತ್ರ ನಾವು ನಾಡಿಗೆ ಸಲ್ಲಿಸುವ ಗೌರವ ಎಂದು ಒಕ್ಕೂಟ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ ತಿಳಿಸಿದರು. ಕನ್ನಡ ನಾಡಿಗೆ ತನ್ನದೆ ಆದ ಇತಿಹಾಸ ಹೊಂದಿದೆ ಭಾರತದಲ್ಲಿ ಅತ್ಯಂತ ಹಳೆಯ ಭಾಷೆ ಕನ್ನಡವಾಗಿದ್ದು ಹೆಚ್ಚಿನ ಜ್ಞಾನಪೀಠ ಪ್ರಶಸ್ತಿ ಪಡೆದ ಶಾಸ್ತ್ರೀಯ ಭಾಷೆಯಾಗಿದೆ ಇದಕ್ಕೆ ಅನೇಕ ಕವಿಗಳು ಸಾಹಿತಿಗಳ ಕನ್ನಡಾಭಿಮಾನಿಗಳ ಶ್ರಮ ಅಡಗಿದೆ ಎಂದರು. ಜಿಲ್ಲಾ ಒಕ್ಕೂಟದ ಕಛೇರಿಯಲ್ಲಿ ಕರ್ನಾಟಕದ ರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.ಭಾಷಾವಾರು ಪ್ರಾಂತ ರಚನೆಯಲ್ಲಿ ಕನ್ನಡ ನಾಡಿಗೆ ಅನ್ಯಾಯವಾಗಿದೆ ನಾಡಿನ ನುಡಿ, ಭಾಷೆ, ನೆಲ ಜಲಗಳಲ್ಲಿ ರಕ್ಷಣೆಯಲ್ಲಿ ಅನ್ಯಾಯವಾಗುತ್ತಿದೆ ಕನ್ನಡಿಗರಿಗೆ ಕೇಂದ್ರ ಬ್ಯಾಂಕ್ ಇತರೆ ಸಂಸ್ಥೆಗಳಲ್ಲಿ ಅನ್ಯಾಯವಾಗುತ್ತಿದೆ ಇದನ್ನು ಸರಿಪಡಿಸುವ ಕೆಲಸ ನಮ್ಮ ಸರ್ಕಾರಗಳು ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಚಳುವಳಿಯಲ್ಲಿ ವಚನಕಾರರ ನಿರ್ದೇಶಕ ಜಗನಾಥ ಕರಂಜೆ ಮಾತನಾಡಿದರು. ಕಾರ್ಯಕ್ರಮದಲ್ಲಿ ನಿರ್ದೇಶಕ ಶ್ರೀಕಾಂತ ಸ್ವಾಮಿ ಸೋಲಪುರ, ಅಣ್ಣಾರಾವ, ನಾಗಶೆಟ್ಟಿ ಪಾಟೀಲ್, ವಿಜಯಕುಮಾರ, ಜಿಲ್ಲಾ ಸಂಯೋಜಕ ಶಿವಶಂಕರ ಬೆಮಳಗಿ, ಜಿಲ್ಲಾ ಪಂಚಾಯತ್ ಲೆಕ್ಕ ಸಹಾಯಕ ಪ್ರವಿಣ ಮಠ, ವೀರಶೆಟ್ಟಿ ಕಾಮಣ್ಣಾ, ಅಮೃತ ಹೊಸಮನಿ ಇತರ ಸಹಕಾರಿಗಳು ಉಪಸ್ಥಿತರಿದ್ದರು.

ಮೈಸೂರು : ದಿನಾಂಕ 01.11.2022 ರಂದು ಆದ್ಯ ಸೌಹಾರ್ದ ಸಹಕಾರಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ.ಜೆ.ಜಿ.ವಿಶ್ವನಾಥಯ್ಯ, ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿಗಳು ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು.

ಮಹಾಲಕ್ಷ್ಮೀ ಪೂಜಾ ಕಾರ್ಯಕ್ರಮ

ಇಶಾನಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಹಾಗೂ ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿಯಲ್ಲಿ ಮಹಾಲಕ್ಷ್ಮೀ ಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ

ಶ್ರೀ ಪಿ ಜಗನಾಥ ಶೆಟ್ಟಿ
ಅಧ್ಯಕ್ಷರು

ಶ್ರೀ ಬಿ. ಮಧುಸೂಧನ್ ನಾಯಕ್
ಉಪಾಧ್ಯಕ್ಷರು

ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಕೊಪ್ಪಳ

ಶ್ರೀ ಯಲ್ಲಪ್ಪ ಕೆ.ಮೇಟಿ
ಅಧ್ಯಕ್ಷರು

ಶ್ರೀ ಪ್ರಾಣೇಶರಾವ್ ಎಲ್.ದೇಸಾಯಿ
ಉಪಾಧ್ಯಕ್ಷರು

ಮನಶಾಸ್ತ್ರಜ್ಞರ ಪ್ರಕಾರ ಹೆಚ್ಚು ಧನಾತ್ಮಕವಾಗಿರಲು 17 ಮಾರ್ಗದರ್ಶಿ ಸೂತ್ರಗಳು ಜಾಗತಿಕ ಪಾಂಡೆಮಿಕ್ ನಂತರ ಆಶಾವಾದದಲ್ಲಿ ಹೂಡಿಕೆ ಮಾಡುವ ಸಮಯ

ಮೂಲ : ಲಿಂಡ್ಸೆ ಗೆಲ್ಲರ್ ಮತ್ತು ಎಮಿಲಿ ಬೆಕರ್ ಅನುವಾದ : ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.

ಮಧ್ಯ ಪಾಂಡೆಮಿಕ್‌ನಲ್ಲಿರುವಾಗ, ನಾನು ಎಂದಿಗೂ ಹೊಂದಿರದ ಬ್ಯಾಚಿಲ್ಲೋರೇಟ್ ಪಾರ್ಟಿಗೆ ಎಂದಿಗೂ ಧರಿಸದ ಹೊಳೆಯುವ ಬಿಳಿ ಉಡುಗೆಗಾಗಿ ಶಾಶ್ವತ ಹುಡುಕಾಟದಲ್ಲಿದ್ದೇನೆ. ಲಸಿಕೆಗೆ ಸಂಬಂಧಿಸಿದಂತೆ ಎಲ್ಲಾ ಧನಾತ್ಮಕ ಬೆಳವಣಿಗೆಗಳೊಂದಿಗೆ, ಭರವಸೆಯನ್ನು ಹೆಚ್ಚಿಸದಂತೆ ನನ್ನನ್ನು ಎಚ್ಚರಿಸುತ್ತೇನೆ... ಆ ಪರಿಪೂರ್ಣತೆಯ ಅನ್ವೇಷಣೆಯನ್ನು ಮಾಡುವುದನ್ನು ಮುಂದುವರೆಸಿದ್ದೇನೆ.

ಪತ್ರಕರ್ತನಾಗಿ, ಐದು Wಗಳು ಮತ್ತು ಒಂದು H, ಯಾರು (Who), ಏನು (What), ಎಲ್ಲಿ (Where), ಯಾವಾಗ (When), ಏಕೆ (Why) ಮತ್ತು ಹೇಗೆ (How). ಆದರೆ, "ಏಕೆ" (Why) ಎಂಬುದನ್ನು ಹೊರತುಪಡಿಸಿ, ನನ್ನ ಬಳಿ ಯಾವುದೇ ಉತ್ತರಗಳಿಲ್ಲ. ಅನಿರೀಕ್ಷಿತವಾಗಿ ಇದ್ದಕ್ಕಿಂತ ಸಂಭವಿಸಿದ ಆರಂಭದಲ್ಲಿ, ಸಾಂಕ್ರಾಮಿಕ ರೋಗದ ಹೆಸರಿನಲ್ಲಿ ಆಟವು ಪ್ರಾರಂಭವಾಯಿತು. ಆದರೆ, 15 ತಿಂಗಳುಗಳ ನಂತರ, ತೀವ್ರವಾಗಿ ರದ್ದಾದ ಕಾರ್ಯಕ್ರಮಗಳು ಮತ್ತು ಮುಂದೂಡಲ್ಪಟ್ಟ ಜೀವನ ಮಾರ್ಗಗಳಿಂದಾಗಿ ತುಂಬಾ ನಿರಾಶದಾಯಕವಾಯಿತು. ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲ.

ಆಶಾವಾದವೇ? ಈ ಆರ್ಥಿಕತೆಯಲ್ಲಿ?

ಸತ್ಯವೇನೆಂದರೆ, ನಿಮ್ಮಲ್ಲಿ ಸಕಾರಾತ್ಮಕತೆಯ ನಾಣ್ಯಗಳು (Pennies) ಉಳಿದಿದ್ದರೆ ಅದು ಹೂಡಿಕೆಗೆ ಯೋಗ್ಯವಾಗಿದೆ. 2019ರ ಒಂದು ಅಧ್ಯಯನದ ಪ್ರಕಾರ, ಆಶಾವಾದವು 11 ರಿಂದ 15 ಪ್ರತಿಶತದಷ್ಟು ದೀರ್ಘಾವಧಿಯ ಜೀವಿತಾವಧಿ ಮತ್ತು "ಅಸಾಧಾರಣ ದೀರ್ಘಾಯುಷ್ಯ" (85 ವರ್ಷಗಳ ನಂತರ ಬದುಕುವುದು) ಸಾಧಿಸುವ ಅಧಿಕ ಸಂಭವನೀಯತೆಯೊಂದಿಗೆ ಸಂಬಂಧಿಸಿದೆ. ಮಾನಸಿಕ ಪ್ರಯೋಜನಗಳು ಸಹ ವಿಪುಲವಾಗಿವೆ : ಪ್ರಕಾಶಮಾನವಾದ ಕಡೆಯಲ್ಲಿ ನೋಡುವುದರಿಂದ ಸಂತೋಷವನ್ನು ಮತ್ತು ಕಡಿಮೆ ಒತ್ತಡವನ್ನು ಅನುಭವಿಸುತ್ತೀರಿ ಎಂದು ಪೆಪ್ಪರ್‌ಡೈನ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಪಕರಾದ ಮನಶಾಸ್ತ್ರಜ್ಞರಾದ ಎಲ್ಯಾಂಗರ್ ಟರ್ನರ್, ಪಿಹೆಚ್‌ಡಿ ಇವರು ಹೇಳುತ್ತಾರೆ. ಆದ್ದರಿಂದ, ಆಕರ್ಷಕ ಹೇಳಿಕೆಗೆ ವಿರುದ್ಧವಾಗಿ ಉತ್ತಮ ಸಮಯಕ್ಕಾಗಿ ಇಲ್ಲಿರುವಾಗ, ಬಹಳ ಸಮಯದವರೆಗೆ ಇಲ್ಲಿರುವಿರಿ.

ಸೂರ್ಯನ ಬಿಸಿಲು ಆರೋಗ್ಯಕ್ಕೆ ಎಷ್ಟು ಮುಖ್ಯವೋ, ದೀರ್ಘಾವಧಿಯ ಅಬ್ಬರದ ನಂತರ ಭರವಸೆಯನ್ನು ಹೆಚ್ಚಿಸುವುದು ಚಾರ್ಲಿ ಬ್ರೌನ್‌ನ ಆ ಎಂದಿಗೂ ತಪ್ಪಿಸಿಕೊಳ್ಳದ ಫುಟ್‌ಬಾಲ್ ಅನ್ನು ಒದೆಯುತ್ತಿರುವಂತೆ ಭಾಸವಾಗುತ್ತದೆ. ಆದರೆ, ಭವಿಷ್ಯದ ಸಂತೋಷವನ್ನು ಕಲ್ಪಿಸಿಕೊಳ್ಳುವುದರಿಂದ ಅದು ಸಂಭವಿಸಿದಲ್ಲಿ ಹೇಗಿರಬಹುದು ಎಂಬ ಒಂದು ಸಣ್ಣ ಭಾಗವನ್ನು ಅನುಭವಿಸಲು ಅವಕಾಶವಾಗುತ್ತದೆ ಎಂದು ಕ್ಲಿನಿಕಲ್ ಸೈಕಾಲಜಿಸ್ಟ್ ಆದ ಎಮಿಲಿ ಅನ್ಹಾಲ್ಟ್, ಪಿಹೆಚ್‌ಡಿ, ಕೋವಾ ಸಹ ಸಂಸ್ಥಾಪಕರು, ಭಾವನಾತ್ಮಕ ಫಿಟ್‌ನೆಸ್ ತರಗತಿಗಳು ಮತ್ತು ಥೆರಪಿ ಸ್ಟಾರ್ಟ್‌ಅಪ್ ಇವರು ಹೇಳುತ್ತಾರೆ. ಪ್ರಕರಣದ ಈ ಅಂಶದಲ್ಲಿ : ಪ್ರವಾಸವನ್ನು ಕೈಗೊಳ್ಳುವುದಕ್ಕಿಂತ ಪ್ರವಾಸವನ್ನು ಯೋಜಿಸುವುದು ಹೆಚ್ಚು ಸಂತೋಷವನ್ನುಂಟು ಮಾಡುತ್ತದೆ. ಸಾಮಾನ್ಯವಾಗಿ ಉಲ್ಲೇಖಿಸಿದ ಸಂಶೋಧನೆಯ ಪ್ರಕಾರ ಇದು ಬಹುತೇಕ ತುಂಬಾ ಪ್ರಸ್ತುತವಾಗಿದೆ. ಆ ರದ್ದಾದ ಪ್ರವಾಸಗಳು/ ವಿಹಾರಗಳು? ಇವುಗಳನ್ನು ಯೋಜಿಸುವ ಮೂಲಕ ಮೆದುಳು ಪ್ರಯೋಜನವನ್ನು ಪಡೆಯಿತು.

ಧನಾತ್ಮಕತೆಗೆ ಧುಮುಕುವುದು ಭಯಾನಕವೆಂದು ತೋರುತ್ತದೆ, ಆದರೆ ಆಚರಣೆಗಳು ಮತ್ತು ಮೈಲಿಗಲ್ಲುಗಳ ಸಾಧ್ಯತೆಗೆ ತೆರೆದುಕೊಳ್ಳುವ ಮೂಲಕ ಧನಾತ್ಮಕತೆಯನ್ನು ಪಡೆಯಲು ಸಹಾಯ ಮಾಡುತ್ತದೆ (ಕೆಲವು ಹಂತದಲ್ಲಿ). ಹೇಗೆ ಎಂಬುದು ಇಲ್ಲಿದೆ.

1. ನಿಮ್ಮ ಕ್ಯಾಲೆಂಡರ್ ಅನ್ನು ರದ್ದುಗೊಳಿಸಿ : ತಿಂಗಳುಗಟ್ಟಲೇ ಯೋಜಿಸಿದ್ದ ಪ್ರವಾಸಗಳು ರಾತ್ರೋರಾತ್ರಿ ಕಣ್ಮರೆಯಾಯಿತು ಮತ್ತು ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಅಂತರ ರಾಷ್ಟ್ರೀಯ ಪ್ರವಾಸಕ್ಕೆ ಯಾವಾಗ "ಸಿಯಾವೋ" ಎಂದು ಹೇಳಲು ಸಾಧ್ಯವಾಗುತ್ತದೆ ಎಂಬುದು ತಿಳಿದಿಲ್ಲವಾದರೂ, ಮುಂದೆ ಒಂದು ದಿನ ಇಂದಿನ ದಿನವನ್ನು ಸಂಭ್ರಮಿಸಬಹುದೆಂಬುದನ್ನು ನಿರೀಕ್ಷಿಸಬಹುದು. ಎಲ್ಲವೂ ಸುರಕ್ಷಿತವಾಗಿದೆ ಎಂದು ಸ್ಥಿರವಾಗುವವರೆಗೂ ವಿಷಯಾಧಾರಿತ ಕಾರ್ಯಕ್ರಮ/ ಸಂಭ್ರಮವನ್ನು ಎಸೆಯಬೇಕು ಎಂಬ ಸಲಹೆಯನ್ನು ಅನ್ಹಾಲ್ಟ್ ಸೂಚಿಸುತ್ತಾರೆ. ಈ ಸಂದರ್ಭದಲ್ಲಿ ಅಧಿಕೃತ ಆಹಾರ ಶೈಲಿ, ಸಾಂಸ್ಕೃತಿಕ ಸಂಗೀತ, ಗಮ್ಯಸ್ಥಾನ ಪ್ರೇರಿತ ಅಲಂಕಾರಗಳು, ನಿಮ್ಮನ್ನು ಪ್ರಚೋದಿಸುವಂತಹ ಯಾವುದೇ ವಿಷಯದ ಬಗ್ಗೆ ಯೋಚಿಸಿ.

2. ನಿಮ್ಮ ಗುರಿ/ ಮಹತ್ವಾಂಕ್ಷೆಯನ್ನು ಊಹಿಸಿಕೊಳ್ಳಿ : ನಿಮಗೆ ಬೇಕಾದ ಭವಿಷ್ಯವನ್ನು ದೃಶ್ಯೀಕರಿಸುವುದು ವಾಸ್ತವವಾಗಿ ಅದನ್ನು ಸಾಧಿಸಲು ಸಹಾಯ ಮಾಡುವ ಪ್ರಬಲ ಮಾರ್ಗವಾಗಿದೆ. "ನೀವು ಪ್ರಬಲ ಉದ್ದೇಶವನ್ನು ಹೊಂದಿದಾಗ, ಅದನ್ನು ಸಾಧಿಸಲು ಎಲ್ಲಾ ರೀತಿಯ ಸೂಕ್ಷ್ಮ ನಿರ್ಧಾರಗಳನ್ನು ಕೈಗೊಳ್ಳಲು ಪ್ರಾರಂಭಿಸುತ್ತೀರಿ" ಎಂದು ಅನ್ಹಾಲ್ಟ್ ಹೇಳುತ್ತಾರೆ. ದೂರದೃಷ್ಟಿಯನ್ನು ಸಿದ್ಧಪಡಿಸಿ, ನೀವು ಮನೆಯಲ್ಲಿ ಹೊಂದಿರುವ ಯಾವುದೇ ಕರಕುಶಲ ವಸ್ತುಗಳೊಂದಿಗೆ ನಿಮ್ಮ ಗುರಿಯನ್ನು DIY ಮಾಡಿ, ಆ ಉತ್ತಮ ಭಾವನೆಗಳು ನಿಮ್ಮ ಗುರಿಗಳನ್ನು ವಾಸ್ತವವಾಗಿ ಸ್ವಯಂ ಸಾಧಿಸಲು ಸಹಾಯ ಮಾಡುತ್ತದೆ ಎಂದು ಟರ್ನರ್ ಹೇಳುತ್ತಾರೆ. ಮನೆಯನ್ನು ಖರೀದಿಸಲು ಬಯಸುತ್ತೀರಿ ಎಂದಾದಲ್ಲಿ ಆನ್‌ಲೈನ್ ಖರೀದಿಯ ಪ್ರಚೋದನೆಯಿಂದ ಉಳಿಸುವ ಮೂಲಕ ಹಣವನ್ನು ಸಂರಕ್ಷಿಸುವ ದೂರದೃಷ್ಟಿಯನ್ನುಂಟು ಮಾಡುತ್ತದೆ.

3. ಎಷ್ಟೇ ಚಿಕ್ಕದಾಗಿದ್ದರೂ – ನಿಮಗೆ ಸಂತೋಷವನ್ನುಂಟು ಮಾಡುವ ಚಟುವಟಿಕೆಗಳನ್ನು ಹುಡುಕಿ : ಧನಾತ್ಮಕತೆ ಮತ್ತು ಸಂತೋಷದ ಬಗ್ಗೆ ಜನರು ಹೊಂದಿರುವ ದೊಡ್ಡ ತಪ್ಪು ಕಲ್ಪನೆ ಎಂದರೆ, ಈ ಭಾವನೆಗಳು ಕೇವಲ ಸಂಭವಿಸುತ್ತವೆ ಎಂದು ಡಾ. ಎರಿನ್ ಒಲೊವೊ, ಪಿಎಚ್‌ಡಿ, ಕ್ಲಿನಿಕಲ್ ಸೈಕೊಲಾಜಿಸ್ಟ್ ಮತ್ತು ಸೆಂಟರ್ ಫಾರ್ ವೈಸ್ ಮೈಂಡ್ ಲಿವಿಂಗ್‌ನ ಸಹ-ಸಂಸ್ಥಾಪಕರು ಹೇಳುತ್ತಾರೆ. ದುಃಖ ಅಥವಾ ಕೋಪವನ್ನು ಅನುಭವಿಸಿದಾಗ, ಆ ಭಾವನೆಗಳನ್ನು ಉಂಟು ಮಾಡಿದ ನಿರ್ದಿಷ್ಟ ನಿದರ್ಶನವನ್ನು ಸಾಮಾನ್ಯವಾಗಿ ತಿಳಿಸಬಹುದು (ಸ್ನೇಹಿತನೊಂದಿಗೆ ಜಗಳ, ಉದ್ಯೋಗ ಅವಕಾಶಕ್ಕಾಗಿ ಹಾದುಹೋಗುವುದು ಇತ್ಯಾದಿ). ಆದರೆ, ಕೆಳಗೆ ಬಿದ್ದಾಗ ನಿಮ್ಮನ್ನು ನೀವು ಕಂಡುಕೊಂಡಾಗಲೂ ಸಹ ಇಂತಹ ನಿರ್ದಿಷ್ಟ ಚಟುವಟಿಕೆಗಳು ಅಥವಾ ಘಟನೆಗಳಿಂದ ಸಂತೋಷ ಅಥವಾ ಪ್ರೀತಿಯಂತಹ ಭಾವನೆಗಳನ್ನು ಪ್ರಚೋದಿಸಬಹುದು ಎಂದು ಗುರುತಿಸುವುದು ಯಾವಾಗಲೂ ಸುಲಭವಲ್ಲ.

ನಿಮ್ಮ ಸಂತೋಷವನ್ನು ಯಾವುದು ಪ್ರಚೋದಿಸುತ್ತದೆ ಎಂದು ನಿಮಗೆ ಹೇಗೆ ಗೊತ್ತು? ಸರಿ, ಅದು ನಿಮಗೆ ಬಿಟ್ಟದ್ದು. ನೀವು ಯಾವಾಗಲೂ ನೃತ್ಯ ಮಾಡಲು ಬಯಸುವ ಹಾಡು ಸಿಕ್ಕಿದೆಯೇ? ತೆಗೆದುಕೊಳ್ಳಿ. ಅಥವಾ, ನಿಮ್ಮ ನಾಯಿಯೊಂದಿಗೆ ಆಟವಾಡುವುದು ಯಾವಾಗಲೂ ನಿಮ್ಮ ಉತ್ಸಾಹವನ್ನು ಹೆಚ್ಚಿಸಿದರೆ, ಇದಕ್ಕೆ ದಿನವಿಡೀ ಸಮಯವನ್ನು ಮೀಸಲಿಡಿ, ಹೊಸ ತಂತ್ರದಲ್ಲಿ ಕೆಲಸ ಮಾಡಿ. "ಪ್ರತಿಯೊಬ್ಬರು ತಮ್ಮ ಸಂತೋಷ ಅಥವಾ ಪ್ರೀತಿ ಅಥವಾ ಉತ್ಸಾಹಕ್ಕಾಗಿ ತಮ್ಮದೇ ಆದ ಪ್ರಚೋದಕಗಳನ್ನು ಕಂಡು ಹಿಡಿಯಬೇಕು ಮತ್ತು ಅವುಗಳಲ್ಲಿ ಕೆಲವು ಏನೆಂದು ನಿಮಗೆ ಮೊದಲೇ ತಿಳಿದಿದ್ದರೆ ಅವುಗಳನ್ನು ಸಕ್ರಿಯವಾಗಿ ಹುಡುಕಬಹುದು" ಎಂದು ಒಲಿವೊ ವಿವರಿಸುತ್ತಾರೆ.

4. ಕೃತಜ್ಞತೆಯ ನಿಯತಕಾಲಿಕೆಯನ್ನು ನಿರ್ವಹಿಸಿ : 2003ರಲ್ಲಿ ಜರ್ನಲ್ ಆಫ್ ಪರ್ಸನಾಲಿಟಿ ಅಂಡ್ ಸೋಷಿಯಲ್ ಸೈಕಾಲಜಿಯಲ್ಲಿ ಪ್ರಕಟವಾದ ಮೂರು ಸಂಬಂಧಿತ ಅಧ್ಯಯನಗಳಲ್ಲಿ, ವಿಜ್ಞಾನಿಗಳು ವ್ಯಕ್ತಿಗಳನ್ನು ವಿವಿಧ ರೀತಿಯಲ್ಲಿ ಸಂಶೋಧನೆ ನಡೆಸಿ ನವೆಂಬರ್ ನಾಲ್ಕನೇ ಗುರುವಾರಕ್ಕೆ ಮಾತ್ರ ಕೃತಜ್ಞತೆಯನ್ನು ಸಲ್ಲಿಸುವುದನ್ನು ಕಾಯ್ದಿರಿಸಬಾರದು ಎಂದು ಹೆಚ್ಚು ಧನಾತ್ಮಕವಾಗಿ ತೀರ್ಮಾನಿಸಿದ್ದಾರೆ. ಕೃತಜ್ಞತೆಯ ನಿಯತಕಾಲಿಕೆಯನ್ನು ನಿರ್ವಹಿಸಿ, ಪ್ರತಿ ರಾತ್ರಿ ಕೆಲವು ನಿಮಿಷಗಳನ್ನು ಮೀಸಲಿರಿಸಿ, ಆ ದಿನ ಸಂಭವಿಸಿದ ತುಂಬಾ ಕೃತಜ್ಞರಾಗಿರುವ ಮೂರು ಘಟನೆಗಳ ಬಗ್ಗೆ ಬರೆಯಿರಿ. ಈ ಅಭ್ಯಾಸವು ನಿಮ್ಮ ಜೀವನದಲ್ಲಿ ಧನಾತ್ಮಕ ಕ್ಷಣಗಳನ್ನು ಶ್ಲಾಘಿಸಲು ಪ್ರೋತ್ಸಾಹಿಸುವುದಲ್ಲದೇ, ದಿನವಿಡೀ ನೀವು ಕೃತಜ್ಞರಾಗಿರುವ ಎಲ್ಲಾ ವಿಷಯಗಳ ಮೇಲೂ ಗಮನಹರಿಸಲು ಪ್ರಾರಂಭಿಸುತ್ತೀರಿ.

ಒಲಿವೊನಿಂದ ಒಂದು ಸಲಹೆ – ಆದರೂ ದಿನದಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಸಾಧ್ಯವಾದಷ್ಟು ನಿರ್ದಿಷ್ಟವಾಗಿರಬೇಕು. ಸೂರ್ಯನು ಬೆಳಗುತ್ತಿರುವುದುನ್ನು ನೋಡಿ ಸಂತೋಷಪಡುತ್ತೀರಿ ಎಂದು ಬರೆಯಬೇಡಿ. ಕೆಲಸದಿಂದ ವಿರಾಮವನ್ನು ತೆಗೆದುಕೊಂಡು ಸೂರ್ಯನ ಬಿಸಿಲಿನಲ್ಲಿ ನಡೆಯುವುದರ ಮೂಲಕ ಸಂತೋಷವಾಯಿತು ಎಂದು ಹೇಳಿ. ಇದು ನಿಮಗೆ ಉಲ್ಲಾಸವನ್ನು ನೀಡುತ್ತದೆ. "ನಾವು ನಿಜವಾಗಿಯೂ ಭಾವನೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದೇವೆ ಹೊರತು ಕೇವಲ ಪಟ್ಟಿ ತಯಾರಿಸುವ ಕಾರ್ಯವನ್ನು ಮಾಡಲು ಪ್ರಯತ್ನಿಸುತ್ತಿಲ್ಲ" ಎಂದು ಅವರು ಹೇಳುತ್ತಾರೆ.

5. ಬೇರೆಯವರಿಗೆ ಏನಾದರೂ ಮಾಡಿ : "ಸ್ವಯಂ ಚಿಕಿತ್ಸೆ ಮಾಡಿಕೊಳ್ಳಿ" ಎಂಬ ಮನಸ್ಥಿತಿಯಲ್ಲಿ ಏನು ತಪ್ಪಿಲ್ಲ. ಆದರೆ, ದೀರ್ಘಾವಧಿ ಸಂತೋಷವನ್ನು ಅನುಭವಿಸಲು ಬಯಸಿದರೆ "ಇತರರಿಗೆ ಚಿಕಿತ್ಸೆ ನೀಡಿ" ಎಂಬ ಮನಸ್ಥಿತಿಯನ್ನು ಅಳವಡಿಸಿಕೊಳ್ಳುವುದು ಉತ್ತಮ. ಒಲಿವೊ ಪ್ರಕಾರ, ಸ್ವಯಂ ಏನಾದರೂ ಮಾಡಿಕೊಳ್ಳುವುದಕ್ಕಿಂತ ನೀವು ಕೊಡುಗೆ ನೀಡುತ್ತಿರುವಿರಿ ಅಥವಾ ಇತರರಿಗೆ ಸೇವೆಯನ್ನು ಸಲ್ಲಿಸುತ್ತಿರುವಿರಿ ಎಂಬ ಭಾವನೆಯು ವೈಯಕ್ತಿಕವಾಗಿ ದೀರ್ಘಾವಧಿ ಬಾಳಿಕೆಯನ್ನು ಸಾಧಿಸುತ್ತದೆ ಎಂದು ತೋರಿಸಲಾಗಿದೆ. ಆದ್ದರಿಂದ, ಮುಂದಿನ ಬಾರಿ ನೀವು ಸ್ವಯಂ ಚಿಕಿತ್ಸೆ ಮಾಡುತ್ತಿರುವಾಗ, ನಿಮ್ಮ ಹಿಂದೆ ಇರುವ ವ್ಯಕ್ತಿಯನ್ನು ಸಹ ಸಾಲಿನಲ್ಲಿ ಪರಿಗಣಿಸಿ.

6. ಧ್ಯಾನ ಮಾಡಿ : ಕಳೆದ ವರ್ಷದಲ್ಲಿ ತೆಗೆದುಕೊಂಡಿರುವ ಸಾವಿರ ಮತ್ತು ಒಂದು ಸಾವಧಾನತೆಯ ಅಪ್ಲಿಕೇಷನ್‌ಗಳ ಬಗ್ಗೆ ನೀವು ಸಂದೇಹ ವ್ಯಕ್ತಪಡಿಸಿದ್ದರೆ, ಇದೀಗ ಒಂದನ್ನು ಪ್ರಯತ್ನಿಸುವ ಸಂದರ್ಭ ಬಂದಿದೆ. ಥಾಂಪ್ಸನ್ ಮತ್ತು ಒಲಿವೊ ಇಬ್ಬರು ಸಹ ನಿಮ್ಮ ದೇಹವನ್ನು ಶಾಂತಗೊಳಿಸುವ ಮತ್ತು ಬಾಹ್ಯ ಗದ್ದಲಗಳನ್ನು ಶಾಂತಗೊಳಿಸುವ ಮಧ್ಯಸ್ಥಿಕೆಯ ಮಾರ್ಗವಾಗಿ ಧ್ಯಾನವನ್ನು ಶಿಫಾರಸ್ಸು ಮಾಡಿದ್ದಾರೆ. ಧ್ಯಾನದ ಅಭ್ಯಾಸವು ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ. ಇದರರ್ಥ ನೀವು ಋಣಾತ್ಮಕತೆಗಳನ್ನು ಶೂನ್ಯಗೊಳಿಸುವ ಬದಲು ಒಟ್ಟಾರೆಯಾಗಿ ಅನುಭವದ ಮೇಲೆ ಗಮನ ಕೇಂದ್ರೀಕರಿಸಲು ಸಹಾಯವಾಗುತ್ತದೆ.

7. ಜಗತ್ತು ಅಸ್ತವ್ಯಸ್ತವಾಗಿದೆ ಎಂದು ಒಪ್ಪಿಕೊಳ್ಳಿ : ಎಷ್ಟೇ ಯೋಜಿಸಿದರೂ, ವೇಳಾಪಟ್ಟಿ ರಚಿಸಿ, ಮುಂದೆ ಯೋಚಿಸಿದರೂ, ಸಹ ನಿಯಂತ್ರಿಸಲಾಗದ ಕೆಲವು ವಿಷಯಗಳಿವೆ (ಕ್ಷಮಿಸಿ, ಆದರೆ ಆ ಮಹಾಶಕ್ತಿಯು ಪ್ರಸ್ತುತ ಔಟ್ ಆಫ್ ಸ್ಟಾಕ್ ಆಗಿದೆ). ಒಮ್ಮೆ ನೀವು ಅದನ್ನು ಒಪ್ಪಿಕೊಂಡರೆ, ಸರಳವಾಗಿ ಮಾಡಲಾಗದ ಎಲ್ಲಾ ಅಸ್ತವ್ಯಸ್ತವಾಗಿರುವ ವಿಷಯಗಳನ್ನು ಕಡಿಮೆ ಸಮಯದಲ್ಲಿ ನೀವು ಬದಲಾಯಿಸಬಹುದು ಎಂದು ಕಾರ್ಪೋರೇಟ್ ಸೈಕೋಲಾಜಿಸ್ಟ್ ಮತ್ತು 21 ದಿನಗಳ ಎಮೋಷನಲ್ ಇಂಟೆಲಿಜೆನ್ಸ್‌ನ ಕ್ರ್ಯಾಶ್ ಕೋರ್ಸ್‌ನ ಸೃಷ್ಟಿಕರ್ತ ಪೆಟ್ರೀಷಿಯಾ ಥಾಂಪ್ಸನ್, ಪಿಹೆಚ್‌ಡಿ ಇವರು ವಿವರಿಸುತ್ತಾರೆ. "ಇದು ನಿಸ್ಸಂಶಯವಾಗಿ ನೀವು ಬಯಸದ ವಿಷಯವಾಗಿದೆ. ಆದರೆ, ನಿಮ್ಮ ಸ್ವಂತ ಮನಸ್ಸಿನಲ್ಲಿ ಇದರ ವಿರುದ್ಧ ಹೋರಾಡುವ ಮೂಲಕ ಅನಗತ್ಯ ಪರಿಸ್ಥಿತಿಯ ಮೇಲೆ ಉದ್ವೇಗ ಮತ್ತು ಆತಂಕದ ಹೆಚ್ಚುವರಿ ಪದರಗಳನ್ನು ಸೇರಿಸುತ್ತೀರಿ" ಎಂದು ಅವರು ಹೇಳುತ್ತಾರೆ.

ಬದಲಾಗಿ, ನಿರ್ದಿಷ್ಟ ಸನ್ನಿವೇಶದಲ್ಲಿ ಏನು ಮಾಡಬಹುದು ಎಂಬುದರ ಕುರಿತು ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಲು ಆ ಸಮಯ ಮತ್ತು

ಶಕ್ತಿಯನ್ನು ಬಳಸಿ. (ಜಾಗತಿಕ ಸಾಂಕ್ರಾಮಿಕದಲ್ಲಿ, ಪ್ರಪಂಚದ ಉಳಿದ ಭಾಗಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ನೀವು ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ, ನಿಮಗಾಗಿ ಸರಿಯಾದ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬಹುದು). ಯಾವಾಗಲೂ ಅನ್ಯಾಯ ಅಥವಾ ಅಸಮಾನ ವಿಷಯಗಳು ಇರುತ್ತವೆ. ಆದರೆ, ಅದಕ್ಕಿಂತ ಹೆಚ್ಚಾಗಿ ಆ ಅನ್ಯಾಯಗಳ ಮೇಲೆ ಹರಿಹಾಯ್ದು ವಿಷಯಗಳನ್ನು ಹೇಗೆ ಉತ್ತಮಗೊಳಿಸಬಹುದು ಎಂಬುದರ ಕುರಿತು ಯೋಚಿಸಿ.

8. ಪ್ರಕೃತಿಗೆ ತೆರೆದುಕೊಳ್ಳಿ : ವಾರಾಂತ್ಯವನ್ನು ನೆಟ್‌ಫ್ಲಿಕ್ಸ್‌ನಲ್ಲಿ ಕಳೆಯುವುದು ಉತ್ತಮ ಆಲೋಚನೆಯಂತೆ ತೋರುತ್ತದೆಯಾದರೂ ಸ್ವಲ್ಪ ಸಮಯವನ್ನು ತೆಗೆದುಕೊಂಡು ಹೊರಗೆ ಹೋದಲ್ಲಿ ನಿಮ್ಮ ಮನಸ್ಸಿಗೆ ಅದ್ಭುತಗಳನ್ನು ಉಂಟು ಮಾಡುತ್ತದೆ. 2019ರಲ್ಲಿ ಯು.ಕೆ.ಯಿಂದ ಪ್ರಕಟವಾದ ವೈಜ್ಞಾನಿಕ ವರದಿಗಳಲ್ಲಿ ವಾರದಲ್ಲಿ ಎರಡು ಗಂಟೆಗಳ ಕಾಲ ಹೊರಗೆ ಕಳೆಯುವುದು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಕಂಡು ಹಿಡಿದಿದೆ. ಹಾಗಂತ, ಶ್ರಮದಾಯಕ ಪಾದಯಾತ್ರೆಯಲ್ಲಿ ಎರಡು ಗಂಟೆಗಳ ಕಾಲ ಕಳೆಯಬೇಕು ಎಂದು ಭಾವಿಸಬೇಡಿ – ಉದ್ಯಾನವನದಲ್ಲಿ ಸುಲಭವಾದ ನಡೆಗೆಯೂ ಕೂಡ ತಂತ್ರ ಮಾಡುತ್ತದೆ ಎಂದು ಥಾಂಪ್ಸನ್ ಹೇಳುತ್ತಾರೆ.

9. ಋಣಾತ್ಮಕ ಪಕ್ಷಪಾತಕ್ಕೆ ಅವಕಾಶ ನೀಡಬೇಡಿ : ದಿನದ ಅಂತ್ಯದಲ್ಲಿ, ಆ ದಿನದಲ್ಲಿ ಸಂಭವಿಸಿದ ಹತ್ತಾರು ಶ್ರೇಷ್ಠ ವಿಷಯಗಳಲ್ಲಿ ವಿರುದ್ಧವಾಗಿ ಸಂಭವಿಸಿದ ಒಂದು ಕೆಟ್ಟ ವಿಷಯದ ಬಗ್ಗೆ ನೀವೂ ಇನ್ನೂ ಯೋಚಿಸುತ್ತಿದ್ದೀರಾ? ನೀವು ಒಬ್ಬಂಟಿಯಾಗಿಲ್ಲ – ಮತ್ತು ನೀವು ದೂಷಿಸಲು ಏನನ್ನಾದರೂ ಹುಡುಕುತ್ತಿದ್ದರೆ..... ನಿಮ್ಮ ಮೆದುಳನ್ನು ದೂಷಿಸಿ. ಒಲಿವೊ ಪ್ರಕಾರ, ನಿಮ್ಮನ್ನು ಜೀವಂತವಾಗಿಡಲು ಮೆದುಳನ್ನು ನಿರ್ಮಿಸಲಾಗಿದೆ. ಇದರರ್ಥ ನಿಮ್ಮ ಪರಿಸರದಲ್ಲಿ ತಪ್ಪಾಗಬಹುದಾದ ಅಥವಾ ನಿಮಗೆ ಹಾನಿ ಉಂಟು ಮಾಡುವ ಎಲ್ಲವನ್ನೂ ನಿರಂತರವಾಗಿ ಪರೀಕ್ಷಿಸಲು ಇದು ತಂತಿಯಾಗಿದೆ. ಇದರರ್ಥ ಮೆದುಳುಗಳು ನಕಾರಾತ್ಮಕತೆಯ ಮೇಲೆ ಕೇಂದ್ರೀಕರಿಸುವ ಪ್ರವೃತ್ತಿಯನ್ನು ಹೊಂದಿವೆ. ಸಾಮಾನ್ಯವಾಗಿ ಧನಾತ್ಮಕವಾಗಿ ಇದನ್ನು "ಋಣಾತ್ಮಕ ಪಕ್ಷಪಾತ" ಎಂದು ಕರೆಯಲಾಗುತ್ತದೆ.

ಆದರೆ, ಮೆದುಳು ಪಕ್ಷಪಾತಿಯಾಗಿರುವುದರಿಂದ ನೀವು ಹಾಗೆಯೇ ಇರಬೇಕೆಂದು ಅರ್ಥವಲ್ಲ. ನಿಯಮಿತವಾಗಿ ಧನಾತ್ಮಕ ಪರಿಸ್ಥಿತಿಯ ಮೇಲೆ ಗಮನ ಕೇಂದ್ರಕರಿಸಲು ಆಯ್ಕೆ ಮಾಡುವ ಮೂಲಕ ಅಥವಾ ನಿಮ್ಮ ಪರಿಸರದಲ್ಲಿ (ಸಂಗಾತಿ, ಕುಟುಂಬ, ಸ್ನೇಹಿತರು) ಧನಾತ್ಮಕ ವಿಷಯಗಳನ್ನು ಹುಡುಕುವ ಮೂಲಕ ನಕಾರಾತ್ಮಕ ಸಂದರ್ಭಗಳಿಗೆ ಕಡಿಮೆ ಪ್ರತಿಕ್ರಿಯಿಸಲು ನಿಮ್ಮ ಮೆದುಳಿಗೆ ತರಬೇತಿ ನೀಡಲು ನೀವು ಸಹಾಯ ಮಾಡಬಹುದು ಎಂದು ಒಲಿವೊ ಹೇಳುತ್ತಾರೆ.

10. ಕೃತಜ್ಞತಾ ಪತ್ರವನ್ನು ಬರೆಯಿರಿ : ಈ ಅಭ್ಯಾಸದಿಂದ ಹೆಚ್ಚು ಕೃತಜ್ಞರಾಗಿರುವ ವ್ಯಕ್ತಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತದೆ. ನಿಮ್ಮ ಜೀವನದಲ್ಲಿ ಸವಾರಿ–ಅಥವಾ–ಸಾಯುವ ಜನರು ಖಂಡಿತವಾಗಿಯೂ ಇದ್ದಾರೆ. ಅವರಿಗೆ ನೀವು ಎಷ್ಟು ಕೃತಜ್ಞರಾಗಿರುತ್ತೀರಿ ಎಂದು ನೀವು ಹೇಳಿರಬಹುದು ಅಥವಾ ಹೇಳದೇ ಇರಬಹುದು. ಆ ಬಹುಮುಖ್ಯ ವ್ಯಕ್ತಿಗಳು ನಿಮ್ಮ ಮೇಲೆ ಪ್ರಭಾವ ಬೀರಿದ ಎಲ್ಲಾ ಅಂಶಗಳನ್ನು ವಿವರಿಸಿ ಅವರಿಗೆ ಕೃತಜ್ಞತಾ ಪತ್ರವನ್ನು ಬರೆಯುವ ಮೂಲಕ ಅವರು ನಿಮಗೆ ಎಷ್ಟು ಅರ್ಥವಾಗಿದ್ದಾರೆ ಎಂಬುದನ್ನು ತಿಳಿಸಿ. ಇದರಿಂದ ನೀವು ಜೀವನದ ಬಗ್ಗೆ ಉತ್ತಮ ದೃಷ್ಟಿಕೋನವನ್ನು ಹೊಂದಿದ್ದೀರಿ ಎಂದು ಥಾಂಪ್ಸನ್ ಖಾತರಿಪಡಿಸುತ್ತಾರೆ.

11. ನಿಮ್ಮ ಭಾವನೆಗಳ ಜವಾಬ್ದಾರಿಯನ್ನು ನೀವು ಹೊಂದಿದ್ದೀರಿ ಎಂಬುದನ್ನು ಅರ್ಥ ಮಾಡಿಕೊಳ್ಳಿ : ಬಹುಶಃ ನೀವು ಈ ಲೇಖನಕ್ಕೆ ಆಕಸ್ಮಿಕವಾಗಿ ಬಂದವರಾಗಿರಬಹುದು ಏಕೆಂದರೆ ನೀವು ಸ್ವಲ್ಪ ಋಣಾತ್ಮಕ ಪ್ರವೃತ್ತಿಯನ್ನು ಹೊಂದಿದ್ದೀರಿ ಎಂದು ನಿಮಗೆ ತಿಳಿದಿದೆ (ನಾವೆಲ್ಲರೂ ಸಹ). ಮಾಹಿತಿಗಾಗಿ : ಇದು "ನೀವು ಇರುವ ರೀತಿಯಲ್ಲಿಯೇ" ಅಲ್ಲ. ಭಾಗಶಃ ನೀವು ನೋಡಿದ ವರ್ತನೆಗಳು ಮತ್ತು ನಿಮ್ಮ ವೈಯಕ್ತಿಕ ಅನುಭವಗಳಿಂದಾಗಿ ಇತರರಿಗಿಂತ ಹೆಚ್ಚು ಹೇಗೆ ತಪ್ಪಾಗುತ್ತಿದೆ ಎಂಬುದರ ಕುರಿತು ನೀವು ಗಮನಹರಿಸುವ ಮೂಲಕ ಬೆಳೆಯಲು ಸಾಧ್ಯವಾಗುತ್ತದೆ ಎಂದು ಒಲಿವೊ ವಿವರಿಸುತ್ತಾರೆ.

ಆದರೆ, ಸರಳ ನಿರ್ಧಾರದಿಂದ ನೀವು ಹೆಚ್ಚು ಆಶಾವಾದಿ ವ್ಯಕ್ತಿಯಾಗಲು ಪ್ರಯತ್ನಿಸಬಹುದು. "ನಮ್ಮ ಭಾವನೆಗಳು ನಮಗೆ ಸಂಭವಿಸುವ ಸಂಗತಿಯಲ್ಲ" ಎಂದು ಒಲಿವೊ ಹೇಳುತ್ತಾರೆ. ನಮ್ಮ ಭಾವನೆಗಳಲ್ಲಿನ ಬದಲಾವಣೆಯನ್ನು ನಾವು ಸಕ್ರಿಯವಾಗಿ ಪ್ರಭಾವ ಬೀರಬಹುದು. ನಾವು ಹೇಗೆ ಭಾವಿಸುತ್ತೇವೆ ಎಂಬುದನ್ನು ನಾವು ನಿರ್ಧರಿಸುತ್ತೇವೆ. ಅಂದರೆ, ಪರಿಸ್ಥಿತಿಗೆ ಹೇಗೆ ಪ್ರತಿಕ್ರಿಯಿಸುತ್ತೀರಿ. ಪರಿಸ್ಥಿತಿಯನ್ನು ಹೇಗೆ ಎದುರಿಸುತ್ತೀರಿ ಮತ್ತು ಪರಿಸ್ಥಿತಿಯಿಂದ ಎಷ್ಟು ಬೇಗನೆ ಪುಟಿದೇಳುತ್ತೀರಿ ಇವೆಲ್ಲವೂ ನೀವು (ಹೌದು, ನೀವು) ನಿಯಂತ್ರಿಸಬಹುದು.

12. ವ್ಯಾಯಾಮ ಮಾಡಿ, ಸರಿಯಾಗಿ ತಿನ್ನಿರಿ ಮತ್ತು ಸಾಕಷ್ಟು ನಿದ್ದೆ ಮಾಡಿ : ಈ ಮೂವರನ್ನು "ನಿಮ್ಮ ತಾಯಿ ಹೇಳಿದ ಎಲ್ಲಾ ವಿಷಯಗಳು" ಎಂದು ಒಲಿವೊ ಉಲ್ಲೇಖಿಸುತ್ತಾರೆ ಮತ್ತು ಈ ವಿಷಯದ ಕುರಿತು ತಾಯಿ ಎಲ್ಲಾ ಸಮಯದಲ್ಲೂ ಸರಿಯಾಗಿದ್ದರು. ಈ ಮೂಲಭೂತ ಅಗತ್ಯಗಳನ್ನು ಪೂರೈಸುವುದರ ಮೂಲಕ ಋಣಾತ್ಮಕ ಭಾವನೆಗಳನ್ನು ದುರ್ಬಲವಾಗಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳುತ್ತಾರೆ. ಪ್ರತಿದಿನವೂ ಓಟ ಅಥವಾ ಬಿಸ್ಕೆಟಿನ ಬದಲಿಗೆ ಸೇಬನ್ನು ತಿನ್ನಲು ನೀವು ಪ್ರೇರೇಪಿಸುವುದಿಲ್ಲ ಎಂಬುದು ನಿಜ. ಆದರೆ, ನೀವು ಇದನ್ನು ಎಷ್ಟು ಹೆಚ್ಚು ಮಾಡುತ್ತಿದ್ದೀರಿ ಎಂಬುದರ ಮೇಲೆ ನಿಮ್ಮ ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಉಂಟು ಮಾಡಲು ನಿಮಗೆ ಸಾಧ್ಯವಾಗುತ್ತದೆ.

13. ಮುಗುಳು ನಗು ಮತ್ತು ಅದನ್ನು ಭರಿಸಿ : ನೀವು ಇದನ್ನು ಸಾಧಿಸುವವರೆಗೂ ಜನರು ಇದನ್ನು ನಕಲಿ ಎಂದು ಹೇಳಲು ಒಂದು ಕಾರಣವಿದೆ. ನೀವು ಅನುಭವಿಸಲು ಎಷ್ಟೇ ಇಷ್ಟಪಡದಿದ್ದರೂ ಸಹ

ನಗುವುದರಿಂದ ನೀವು ಉತ್ತಮವಾಗಲು ಸಹಾಯ ಮಾಡುತ್ತದೆ ಎಂಬುದಕ್ಕೆ ಕೆಲವು ವೈಜ್ಞಾನಿಕ ಪುರಾವೆಗಳಿವೆ. ಈ ಕ್ರಿಯೆಯು ಮೆದುಳಿಗೆ ಸಂಕೇತವನ್ನು ಕಳುಹಿಸುವ ಮೂಲಕ ನೀವು ಹೊಂದಿರುವ ನಕಾರಾತ್ಮಕ ಆಲೋಚನೆಗಳನ್ನು ಶಾಂತಗೊಳಿಸಲು ಸಹಾಯ ಮಾಡುತ್ತದೆ ಮತ್ತು ಆ ಭಾವನೆ-ಉತ್ತಮ ನರಪ್ರೇಕ್ಷಕಗಳನ್ನು (ಡೋಪಮೈನ್‌ನಂತಹ) ಬಿಡುಗಡೆ ಮಾಡುವ ಮೂಲಕ ಬಿಸಿ ಹಾಗೂ ಅಸ್ಪಷ್ಟತೆಯನ್ನು ಹೋಗಲಾಡಿಸಲು ಸಹಾಯ ಮಾಡುತ್ತದೆ.

ಈಗ, "ಅದನ್ನು ಭರಿಸಿ" ಭಾಗ ಬರುತ್ತದೆ. ಇದು ಜಗತ್ತಿಗೆ ಹೆಚ್ಚು ಆಶಾವಾದಿ ವಿಧಾನವನ್ನು ತೆಗೆದುಕೊಳ್ಳುವುದು ಮತ್ತು ನೀವು ಚೇತರಿಸಿಕೊಳ್ಳುವಿರಿ ಎಂದು ನಂಬುವುದು ಎಂದು ಥಾಂಪ್ಸನ್ ವಿವರಿಸುತ್ತಾರೆ. "ಸಕಾರಾತ್ಮಕ ಜನರು ಹೆಚ್ಚು ನಿರಾಶಾವಾದಿ ಜನರಂತೆ ಅದೇ ಸವಾಲುಗಳನ್ನು ಎದುರಿಸುತ್ತಾರೆ" ಎಂದು ಅವರು ಹೇಳುತ್ತಾರೆ. "ಆದಾಗ್ಯೂ, ಅವರು ಜೀವನದಲ್ಲಿ ಅನಿವಾರ್ಯ ಸವಾಲುಗಳನ್ನು ತಡೆದುಕೊಳ್ಳಬಲ್ಲರು ಎಂಬ ಆಧಾರವಾಗಿರುವ ನಂಬಿಕೆಯನ್ನು ಹೊಂದಿರುವುದರಿಂದ ಅವರು ನಿಜವಾಗಿಯೂ ವೇಗವಾಗಿ ಪುಟಿದೇಳುತ್ತಾರೆ."

ಹೆಚ್ಚು ವೇಗವಾಗಿ ಪುಟಿಯುವ ಸಾಮರ್ಥ್ಯವು ನಿಮ್ಮ ಜೀವನದ ಇತರ ಅಂಶಗಳಲ್ಲಿಯೂ ಸಹ ನಿಮಗೆ ಸಹಾಯ ಮಾಡುತ್ತದೆ. ಆಶಾವಾದವು ವ್ಯವಹಾರದಲ್ಲಿ ಉತ್ತಮ ಯಶಸ್ಸಿಗೆ ಮತ್ತು ಸಂತೋಷಗಳಿಗೆ ಸಂಬಂಧಿಸಿದೆ. ಥಾಂಪ್ಸನ್ ಪ್ರಕಾರ, ಧನಾತ್ಮಕವಾಗಿರುವುದು ಎಂದರೆ ನೀವು ಹೆಚ್ಚು ಛಲ ಹೊಂದಿರುವ ವ್ಯಕ್ತಿ ಎಂದು ಅರ್ಥ ಮತ್ತು ಛಲವನ್ನು ಹೊಂದಿದ್ದರೆ ನೀವು ಬಹುಶಃ ಯಶಸ್ವಿಯಾಗುವ ಸಾಧ್ಯತೆ ಹೆಚ್ಚು.

14. ಅದು ಬಂದಾಗ ಋಣಾತ್ಮಕವಾಗಿ ತೆಗೆದುಕೊಳ್ಳಿ : ಹಿಂದಿನ ಸಲಹೆಗಳನ್ನು ನಿಮ್ಮ ಜೀವನದಲ್ಲಿ ಎಷ್ಟೇ ಅಳವಡಿಸಿಕೊಂಡಿದ್ದರೂ ಸಹ ದಾರಿಯಲ್ಲಿ ಕೆಲವು ಉಬ್ಬುಗಳು ಎದುರಾಗುವುದಿಲ್ಲ ಎಂಬುದಕ್ಕೆ ಯಾವುದೇ ಖಾತರಿ ಇರುವುದಿಲ್ಲ. ವಾಸ್ತವವಾಗಿ, ಕೆಲವೇ ಸಮಯದಲ್ಲಿ ನೀವು ಹಿನ್ನಡೆಯನ್ನು ಅನುಭವಿಸುವಿರಿ ಎಂಬುದು ಖಾತರಿಯಾಗಿರಬಹುದು-ನೀವು ಮನುಷ್ಯರು. ಆದರೆ, ನಕಾರಾತ್ಮಕ ಮತ್ತು ಸಕಾರಾತ್ಮಕ ಭಾವನೆಗಳನ್ನು ಒಟ್ಟಿಗೆ ಅನುಭವಿಸಲು ನಿಮಗೆ ಸಾಧ್ಯವಾದರೆ ಈ ಸಮತೋಲನವು ನಿಮ್ಮ ದೃಷ್ಟಿಕೋನವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಒಲಿವೊ ಹೇಳುತ್ತಾರೆ.

ಏನನ್ನಾದರೂ ಕಳೆದುಕೊಳ್ಳುವುದು ನಿಮಗೆ ಎಷ್ಟು ಮುಖ್ಯ ಎಂದು ನೋಡಲು ಸಹಾಯ ಮಾಡುತ್ತದೆ ಎಂಬ ಕಲ್ಪನೆಗೆ ಇದು ಹೋಲುತ್ತದೆ ಎಂದು ಅವರು ವಿವರಿಸುತ್ತಾರೆ. (ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗಿದೆಯೇ? ನೀವು ಸಾಧಿಸಿದ ಎಲ್ಲವನ್ನೂ ನೆನಪಿಸಿಕೊಳ್ಳಿ ಮತ್ತು ಅದರಲ್ಲಿ ಹೆಮ್ಮೆಪಡಿ) "ನೀವು ಹೆಚ್ಚು ಧನಾತ್ಮಕತೆಯನ್ನು ಸಾಧಿಸಲು ಪ್ರಾರಂಭಿಸಿದರೆ ತಕ್ಷಣವೇ ಇಂದೇ ಫಲಿತಾಂಶ ನೀಡದಿರಬಹುದು. ಆದರೆ, ಮುಂದೆ ಹೆಚ್ಚು ಧನಾತ್ಮಕತೆಯನ್ನು ಅನುಭವಿಸಲು ಸಹಾಯ ಮಾಡುತ್ತದೆ ಎಂದು ಎಲ್ಲಾ ಸಂಶೋಧನೆಗಳು ಇದನ್ನೇ ತೋರಿಸುತ್ತವೆ" ಎಂದು ಒಲಿವೊ ಹೇಳುತ್ತಾರೆ.

15. ಉತ್ತೇಜಕ ಮಂತ್ರವನ್ನು ಸಿದ್ಧವಾಗಿಟ್ಟುಕೊಳ್ಳಿ : ನೀವು ಹಿನ್ನೆಡೆಯನ್ನು ಅನುಭವಿಸಿದಾಗ ಸ್ವತಃ ನಿಮ್ಮನ್ನು ನೀವೇ ಹುರಿದುಂಬಿಸುವ ನಾಯಕರಾಗಲು ಇದು ಸಹಾಯ ಮಾಡುತ್ತದೆ. "ನೀವು ಇದನ್ನು ಮಾಡಬಹುದು", "ನೀವು ಇದನ್ನು ಸಾಧಿಸುವಿರಿ", "ನೀವು ನಿಮ್ಮ ಕೈಲಾದಷ್ಟು ಉತ್ತಮವಾಗಿ ಮಾಡುತ್ತಿರುವಿರಿ" ಮತ್ತು "ನೀವು ಇದನ್ನು ಪಡೆದುಕೊಂಡಿದ್ದೀರಿ" ಎಂಬ ವಿಷಯಗಳನ್ನು ನಿಮಗೆ ನೀವೇ ಹೇಳಿಕೊಳ್ಳುವ ಮೂಲಕ ಉತ್ತೇಜಿಸುತ್ತದೆ ಎಂದು ಡಾ. ಥಾಂಪ್ಸನ್ ಸಲಹೆಯನ್ನು ನೀಡುತ್ತಾರೆ.

16. ಇದು ಪ್ರಯಾಣ ಎಂದು ನೆನಪಿಟ್ಟುಕೊಳ್ಳಿ : ಸಕಾರಾತ್ಮಕ ವ್ಯಕ್ತಿಯಾಗುವುದು ಕೇವಲ ರಾತ್ರೋರಾತ್ರಿ ಸಾಧ್ಯವಾಗುವುದಿಲ್ಲ. ನಿಮ್ಮ ಮೆದುಳಿನ ಸಹಜ ಪ್ರವೃತ್ತಿಯನ್ನು ನೀವು ಮರು ವಿನ್ಯಾಸಗೊಳಿಸಲು ಪ್ರಯತ್ನಿಸುತ್ತಿದ್ದೀರಿ. ಆದರೆ, ನೀವು ಹೆಚ್ಚು ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಲು ನಿರಂತರವಾಗಿ ಕೆಲಸ ನಿರ್ವಹಿಸಿದ ನಂತರ ಅಂತಿಮವಾಗಿ ನಿಮ್ಮ ಮನಸ್ಸು ಅದನ್ನು ಅನುಸರಿಸುತ್ತದೆ. "ನೀವು ನಿಜವಾಗಿಯೂ ನಿಮ್ಮ ಮೆದುಳಿಗೆ ತರಬೇತಿಯನ್ನು ನೀಡುತ್ತಿರುವಿರಿ" ಎಂದು ಒಲಿವೊ ಹೇಳುತ್ತಾರೆ. "ನಿಮ್ಮ ಮೆದುಳಿಗೆ ಅದು ಮಾಡಲು ಬಯಸುವುದಕ್ಕಿಂತ ವಿಭಿನ್ನವಾದದ್ದನ್ನು ಮಾಡಲು ನೀವು ತರಬೇತಿ ನೀಡುತ್ತಿದ್ದೀರಿ".

17. ನಿಮ್ಮ ಸ್ವಯಂ ಭವಿಷ್ಯವನ್ನು ನಂಬಿರಿ : "ಅದು ಹೇಗೆ ಸಂಭವಿಸುತ್ತದೆ?" ಸಾಂಕ್ರಾಮಿಕ ಸಮಯದಲ್ಲಿ ನೀವು ಮತ್ತು ನಾನು ಸಾಮಾನ್ಯವಾದದ್ದನ್ನು ಎದುರಿಸಿದ್ದೇವೆ ಎಂದು ಸರಿಸುಮಾರು ಒಂದು ಮಿಲಿಯನ್ ಬಾರಿ ಯೋಚಿಸಿದ್ದೇನೆ. ಆದರೆ ಕೆಟ್ಟ ಸುದ್ದಿ : ಸಂಭಾವ್ಯ ಸಮಸ್ಯೆಗಳು ಬರುವುದಕ್ಕಿಂತ ಮೊದಲೇ ಪರಿಹರಿಸಲು ಪ್ರಯತ್ನಿಸುವುದು ಜೀವನದ ವಿಶೇಷ ಕ್ಷಣವನ್ನು ಎದುರು ನೋಡುವುದನ್ನು ಮತ್ತು ಪ್ರಸ್ತುತದಲ್ಲಿ ಜೀವಿಸುವುದನ್ನು ತಡೆಯುತ್ತದೆ ಎಂದು ಟರ್ನರ್ ಹೇಳುತ್ತಾರೆ.

ಜೀವನದ ಅನಿವಾರ್ಯ ಉಬ್ಬರವಿಳಿತಗಳ ನಡುವೆ ಸಮತೋಲಿತ ಜಾಗೃತ ಆಶಾವಾದವನ್ನು ಸಾಧಿಸುವುದು ಹೇಗೆ? ನೀವು ಕೃತಜ್ಞರಾಗಿರುವವರ (ಸ್ನೇಹ, ಸಂಬಂಧ, ಆರೋಗ್ಯ, ಇತ್ಯಾದಿ) ಮೇಲೆ ಕೇಂದ್ರೀಕರಿಸುವ ಮೂಲಕ ಇದೀಗ ಯಾವುದು ನಿಜವೋ ಅದರಲ್ಲಿ ಹೂಡಿಕೆ ಮಾಡಿ ಮತ್ತು ನಿಮ್ಮ ಸ್ವಯಂ ಜೀವನದ ಭವಿಷ್ಯದಲ್ಲಿ ಯಾವುದೇ ಕಾರ್ಯವನ್ನು ನಿಭಾಯಿಸಲು ಸಾಧ್ಯವಾಗುತ್ತದೆ ಎಂಬುದನ್ನು ನಂಬಿರಿ ಎಂದು ಅನ್ವಾಲ್ಟ್ ಹೇಳುತ್ತಾರೆ. (ಸಾಂಕ್ರಾಮಿಕ ' ರೋಗದ ಉತ್ತಮ ಭಾಗವನ್ನು ಈಗಾಗಲೇ ಸ್ವಯಂ ಅನುಭವಿಸಿದ್ದೀರಿ – ನೀವು ಪಡೆದುಕೊಂಡಿದ್ದೀರಿ, ನಿಜವಾಗಿ!)

ಸಂದೇಹವಿದ್ದಲ್ಲಿ, ನೀವು ಈಗಾಗಲೇ ಏನನ್ನು ಸಾಧಿಸಿರುವಿರಿ ಎಂಬುದನ್ನು ನೆನಪಿಸಿಕೊಳ್ಳುವ ಮಾರ್ಗಗಳನ್ನು ಕಂಡುಕೊಳ್ಳಿ ಮತ್ತು ಏನಾಗಿದ್ದರೂ ಚಿಂತೆಯಿಲ್ಲದೇ ಗುರಿಗಳನ್ನು ಅನುಸರಿಸುವಲ್ಲಿ ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ.

ನನಗಾಗಿ? ಅಂದರೆ ಬಿಳಿ ಉಡುಪನ್ನು ಖರೀದಿಸುವುದು – ಮತ್ತು ಅದನ್ನು ಭವಿಷ್ಯದಲ್ಲಿ ಧರಿಸಲು ಸಮಯ ಮತ್ತು ಸ್ಥಳವನ್ನು ಲೆಕ್ಕಾಚಾರ ಮಾಡುತ್ತದೆ ಎಂದು ನಂಬುತ್ತೇನೆ, ಅದು ಕೇವಲ ಹಿತ್ತಲಿನಲ್ಲಿದ್ದರೂ ಸಹ.

ಸಹಕಾರ ತತ್ವದ ಉಗಮ, ಸ್ವರೂಪ ಮತ್ತು ಸಂಘಟನೆ ಒಂದು ಸಿಂಹಾವಲೋಕನ

– ಶ್ರೀ ಶಂಕರ ಹೆಗಡೆ

ಪೀಠಿಕೆ : ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಮುಂತಾದ ಪದಪುಂಜಗಳೇ ಸಾಂಘಿಕ ಬದುಕಿನ ಮೂಲ ಧ್ವನಿ. ಮನುಷ್ಯನ ಸಂಘ ಜೀವನಕ್ಕೆ ಈ ಮೂಲ ಧ್ವನಿಯೇ ಬುನಾದಿ. ಮದುವೆ ಮುಂತಾದ ಮಂಗಳ ಕಾರ್ಯಗಳಲ್ಲಿ, ಮರಣವೇ ಮೊದಲಾದ ದುರಂತಗಳಲ್ಲಿ ಮಾನವ ಸಾಂಘಿಕ ಸಹಕಾರಿ ಬಗೆಯಲ್ಲಿ ಒಂದಾಗುತ್ತಿದ್ದ. ಹಿಂದಿನ ಕಾಲದಲ್ಲಿ ಸಾಂಘಿಕ, ಸಹಕಾರಿ ತತ್ವ ಅಡಗಿತ್ತು ಎಂಬುದಕ್ಕೆ ಈ ಮಾತುಗಳು ಪುಷ್ಟಿ ನೀಡುತ್ತವೆ. ತನ್ನ ಮೂಲ ಧ್ವನಿ ತತ್ವಗಳೊಂದಿಗೆ ಕಳೆದ ಶತಮಾನಕ್ಕೆ ಮುಂಚಿತವಾಗಿ ಅಸಂಘಟಿತ ರೂಪದಲ್ಲಿ ಪ್ರಚಲಿತವಾಗಿತ್ತು.

ಉಗಮ : ಸಾವಿರಾರು ವರ್ಷಗಳಿಂದ ಮಾನವ ಸಮಾಜ ಜೀವಿಯಾಗಿ ಪರಸ್ಪರ ಹೊಂದಾಣಿಕೆಯಿಂದ ತಮ್ಮ ತಮ್ಮ ಪುಟ್ಟ ಪರಿಧಿಯಲ್ಲಿಯೇ ಶಾಂತಿಯುತವಾಗಿ ಬದುಕುತ್ತಿದ್ದ. ಆದರೆ 18ನೇ ಶತಮಾನದ ಔದ್ಯೋಗಿಕ ಕ್ರಾಂತಿಯು ಶತಶತಮಾನಗಳ ಮನುಷ್ಯನ ಬದುಕಿನ ರೀತಿ ನೀತಿಗಳನ್ನು ಬದಲಾಯಿಸಿತು. ಯಂತ್ರಗಳ ಆಗಮನದಿಂದ ಸಾಮಾನ್ಯ ಜನ ತಮ್ಮ ಉದರ ಪೋಷಣೆಯ ಉದ್ಯೋಗಗಳನ್ನು ಕಳೆದುಕೊಂಡು ಕಾರ್ಖಾನೆಗಳಲ್ಲಿ ಕೂಲಿಕಾರರಾಗಿ ಸೇರಿಕೊಂಡರು. ಶ್ರೀಮಂತ ವ್ಯಕ್ತಿಗಳು ಕೇವಲ ಹಣದಾಸೆಗಾಗಿ ಮಾನವೀಯ ಮೌಲ್ಯಗಳನ್ನು ತ್ಯಜಿಸಿ ಬಡ ಜನರನ್ನು ಶೋಷಣೆ ಮಾಡಲು ಪ್ರಾರಂಭಿಸಿದರು. ಈ ಪರಿಸ್ಥಿತಿಯಲ್ಲು ಸಾಮಾಜಿಕ ನ್ಯಾಯ ನಶಿಸಿ ಹೋಯಿತು. ಆಗ ಉಗಮವಾದ ಸಹಕಾರ ಹೊಸ ರೂಪ ತಾಳಿ ಸಮಾಜಕ್ಕೆ ಬೆಳಕಾಗಿ ಮತ್ತು ದಾರಿ ದೀಪವಾಗಿ ಬಂತು.

ಯುರೋಪದಲ್ಲಿ ಸಹಕಾರದ ಉಗಮ : ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಹಲವಾರು ಚಿಂತಕ್ರು ಹೊಸ ಮಾರ್ಗಗಳನ್ನು ಶೋಧಿಸಿದರು. ಅಂತಹ ಚಿಂತಕರಲ್ಲಿ ಪ್ರಖ್ಯಾತಗೊಂಡ ರಾಬರ್ಟ್ ಓವೆನ್ ಪ್ರಥಮರು. ಲಂಡನ್ ಸಮೀಪದ ರಾಕ್ ಡೇಲ ಎಂಬ ಊರಿನಲ್ಲಿ 28/10/1844 ರಂದು "ರಾಕಡೇಲ ಪಯನಿಯರ್ಸ್ ಕೋ– ಆಪರೇಟಿವ್ ಸೊಸೈಟಿ ಲಿಮಿಟೆಡ್" ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಇದರ ಮುಖಾಂತರ ರಾಬರ್ಟ್ ಓವನ್ನರೇ ಆಧುನಿಕ ಸಹಕಾರಿ ವಿಚಾರಣಾ ಪ್ರಣಾಳಿಕೆಗೆ ತಳಹದಿಯನ್ನು ಹಾಕಿದರೆಂದು ಹೇಳಬಹುದು. ಹೀಗೆ 28–10–1844 ರಲ್ಲಿ ಜಗತ್ತಿನಲ್ಲಿ ಪ್ರಾರಂಭಗೊಂಡ ಸಹಕಾರ ಚಳುವಳಿ ಎಲ್ಲಾ ದೇಶಗಳಲ್ಲಿಯೂ ಹಬ್ಬಿತು.

ಭಾರತದಲ್ಲಿ ಸಹಕಾರದ ಹುಟ್ಟು : ನಮ್ಮ ದೇಶದಲ್ಲಿ ಬ್ರಿಟೀಷ್ ಸರ್ಕಾರ ಪ್ರಥಮ ಸಹಕಾರ ಕಾಯ್ದೆಯನ್ನು ಮಾರ್ಚ್ 25, 1904 ರಲ್ಲಿ ಜಾರಿಗೆ ತಂದಿತು. ಭಾರತದಲ್ಲಿ ಸಹಕಾರ ಕ್ಷೇತ್ರವು ಸರ್ಕಾರದ ಕೃಪಾ ಪೋಷಿತವಾಗಿ ಹುಟ್ಟಿ ಬಂದಿದೆ. ಈಗಲೂ ಸಹ ಸ್ವಲ್ಪ ಮಟ್ಟಿಗೆ ಮುಂದುವರಿಯುತ್ತಿರುವುದು ಗಮನಾರ್ಹ ಸಂಗತಿ.08–05–1905ರಲ್ಲಿ ಗದಗ್ ಜಿಲ್ಲೆಯ ಕಣಗಿನ ಹಾಳ ಎಂಬ ಗ್ರಾಮದಲ್ಲಿ ದಿವಂಗತ ಎಸ್. ಪಾಟೀಲ್ ಇವರ ಮಾರ್ಗದರ್ಶನದಲ್ಲಿ ಪ್ರಥಮ ಸಹಕಾರ ಸಂಘ ಕೃಷಿ ಪತ್ತಿನ ಸಹಕಾರ ಸಂಘವಾಗಿ ಜನ್ಮ ತಾಳಿರುವುದು ಕೃಷಿಗೆ ಮತ್ತು ಕೃಷಿಕರಿಗೆ ಈ ಚಳುವಳಿ ನಮ್ಮ ದೇಶದಲ್ಲಿ ಪ್ರಾರಂಭಗೊಂಡಿರುವುದು ಐತಿಹಾಸಿಕ ಸತ್ಯ. ತದ ನಂತರ 1912 ರ ಸಹಕಾರಿ ತಿದ್ದುಪಡಿ ಕಾಯ್ದೆ ವಿವಿಧ ರೀತಿಯ ಸಹಕಾರ ಸಂಘಗಳನ್ನು ಅಂದರೆ ಕೃಷಿ, ಮಾರಾಟ, ಗ್ರಾಹಕ, ಹೈನುಗಾರಿಗೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಸಹಕಾರಿ ಕ್ಷೇತ್ರಗಳು ನೋಂದಣಿಗೊಂಡು ಹಲವು ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗಳನ್ನು ಮಾಡಿ ಯಶಸ್ವಿಯಾಗಿವೆ.

ಸಹಕಾರಿ ಸಂಘಗಳ ವೈಶಿಷ್ಟ್ಯ : ಸಾಮಾನ್ಯ ಜನರು ಸಹಕಾರಿ ಸಂಘವೆಂದರೆ ಸಾರ್ವಜನಿಕ ಸಂಘವೆಂದು ತಿಳಿದಿದ್ದಾರೆ. ಸಹಕಾರಿ ಸಂಘವು ಸಾರ್ವಜನಿಕ ಸಂಸ್ಥೆಯಲ್ಲ. ಸಂಘವು ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡು, ಆ ಉದ್ದೇಶಗಳಲ್ಲಿ ಆಸಕ್ತಿ ಹೊಂದಿದ ವ್ಯಕ್ತಿಗಳು ಆ ಸಂಘದ ಸದಸ್ಯರಾಗಿ, ಆ ಸಂಘದ ಮುಖಾಂತರ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳವರು. ಸಂಘದ ಮೂಲೋದ್ದೇಶ ತನ್ನ ಸದಸ್ಯರ ಆರ್ಥಿಕ ಉನ್ನತಿಯನ್ನು ಹೊಂದುವುದಾಗಿರುತ್ತದೆ. ಇದಕ್ಕೆ ಪೂರಕವಾಗಿ ಸಾಮಾಜಿಕ ಕೆಲಸಗಳನ್ನು ತಮ್ಮ ಪರಿದಿಯಲ್ಲಿ ಕೈಕೊಳ್ಳಬಹುದು. ಸಹಕಾರಿ ಸಂಘದ ಎಲ್ಲ ಸದಸ್ಯರು ಸಮಾನ ಹಕ್ಕುದಾರರು. ಅವರು. ತಚಿಸಿಕೊಂಡ ಸಂಘದ ಏಳು ಬೀಳಿಗೆ ಸದಸ್ಯರೇ ಹೊಣೆಗಾರರಾಗುತ್ತಾರೆ. ಸಹಕಾರಿ ಸಂಘ ಒಂದು ಅವಿಭಕ್ತ ಕುಟುಂಬ ಇದ್ದ ಹಾಗೆ. ಸಂಘದ ಲಾಭ ಹಾನಿಗೆ ಸದಸ್ಯರಷ್ಟೇ ಹೊಣೆಗಾರರು. ಸದಸ್ಯರಲ್ಲದವರಿಗೆ ಸಂಘದ ವ್ಯವಹಾರಗಳನ್ನು ಪ್ರಶ್ನೆ ಮಾಡುವ ಹಕ್ಕು ಇರುವುದಿಲ್ಲ.

ಉಪಸಂಹಾರ : ಪ್ರಜಾಸತ್ತಾತ್ಮಕ ಪದ್ಧತಿಯನ್ನು ಅನುಸರಿಸಿ ಸದಸ್ಯರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಆಡಳಿತ ನಡೆಸುತ್ತಿರುವ ಸಹಕಾರ ಚಳುವಳಿ ಮಹಾತ್ಮ ಗಾಂಧೀಜಿರವರು ಹೇಳಿದಂತೆ "ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರಿವೇ ಹೆಬ್ಬಾಗಿಲು" ಎಂಬುದು ಐತಿಹಾಸಿಕ ಸತ್ಯ. ಅನೇಕ ಸಲ ದುರಾಡಳಿತ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ರಾಜಕೀಯ ಹಸ್ತಕ್ಷೇಪ ಮುಂತಾದವುಗಳು ಅಲ್ಲಲ್ಲಿ ಪವಿತ್ರವಾದ ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ ಪ್ರವೇಶಿಸಿದರು ಸಹ ಸಹಕಾರ ಸಂಘಗಳು ಒಂದು ಉತ್ತಮ ಆರ್ಥಿಕ ಪದ್ಧತಿಯಾಗಿ ಸಾಮಾನ್ಯ ಜನತೆಯ ಆರ್ಥಿಕ, ಸಾಮಾಜಿಕ ಉನ್ನತಿಗಾಗಿ ಶ್ರಮಿಸುತ್ತಿವೆ. ಒಟ್ಟಿನಲ್ಲಿ ಹೇಳಬೇಕಾದರೆ ಸಹಕಾರಿ ಕ್ಷೇತ್ರದಲ್ಲಿ ಪ್ರಾಮಾಣಿಕತೆ, ದಕ್ಷತೆ, ಮಾನವೀಯ ಗುಣಗಳಿಂದ ಮಾತ್ರ ಸಹಕಾರದ ಮೂಲ ಉದ್ದೇಶದ ಗುರಿಗಳನ್ನು ಸಾಧಿಸಲು ಸಾಧ್ಯವೆಂದು ಹೇಳಬಹುದು.

" **ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ** "

ಕನ್ನಡಿಗರ ಹಬ್ಬ - ಕನ್ನಡ ರಾಜ್ಯೋತ್ಸವ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು.

ಪೀಠಿಕೆ :

ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ ಕನ್ನಡ... ಕನ್ನಡ... ಕಸ್ತೂರಿ... ಕನ್ನಡ... ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು. ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು. ಬದುಕಿದು ಜಟಕಾಬಂಡಿ, ಇದು ವಿಧಿ ಓಡಿಸುವ ಬಂಡಿ... ಬದುಕಿದು ಜಟಕಾ ಬಂಡಿ, ವಿಧಿ ಗುರಿ ತೋರಿಸುವ ಬಂಡಿ ಎಂದು ಅಂದು ಡಾ. ರಾಜ್ ಕುಮಾರ್ ಹಾಡಿದ್ದರು. ಹೌದು ನಮ್ಮ ಕನ್ನಡ ನಾಡು – ನುಡಿಯಲ್ಲಿ ಆ ಒಂದು ಶ್ರೇಷ್ಠತೆ ಇದೆ. "ಕನ್ನಡ ಭಾಷೆ ನಮ್ಮ ಸಂಸ್ಕೃತಿ" ಇಂದು ನಾವು 67ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ನಾವು ನಮ್ಮ ಕನ್ನಡದ ಸುಗ್ಗಿಯನ್ನು ಕೇವಲ ನವೆಂಬರ್ ಮಾಸದಲ್ಲಿ ಮಾತ್ರವಲ್ಲ ಪ್ರತಿ ದಿನ ಆಚರಿಸಬೇಕು.

ಕನ್ನಡ ಎಂದರೆ ಕೇವಲ ವರ್ಣಮಾಲೆಯಲ್ಲ, ಅದು ಕರುನಾಡ ನೆಲ, ಜಲ, ಜನ, ಬದುಕು, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಎಲ್ಲವನ್ನೂ ಒಳಗೊಂಡಿದೆ. ಕರುನಾಡು ಸ್ವರ್ಗದ ಸೀಮೆ–ಕಾವೇರಿ ಹುಟ್ಟಿನ ನಾಡು. ಕಲ್ಲಲ್ಲಿ ಕಲೆಯನ್ನು ಕಂಡ – ಬೇಲೂರ ಶಿಲ್ಪದ ಬೀಡು. ಬಸವೇಶ್ವರ, ರನ್ನ–ಪಂಪರ ಕವಿವಾಣಿಯ ನಾಡು ನಮ್ಮ ಕನ್ನಡ ನಾಡು. ಚಾಮುಂಡಿ ರಕ್ಷೆಯು ನಮಗೆ– ಗೊಮ್ಮಟೇಶ್ವರ ಕಾವಲು ಇಲ್ಲಿ. ಶೃಂಗೇರಿ ಶಾರದೆ ವೀಣೆ–ರಸತುಂಗೆ ಆಗಿದೆ ಇಲ್ಲಿ. ವಿಶ್ವಖ್ಯಾತಿಯ ವಿಶ್ವೇಶ್ವರಯ್ಯ ಜನಿಸಿದ ಈ ನಾಡು. ಇದೆ ನಾಡು – ಇದೆ ಭಾಷೆ ಎಂದೆಂದೂ ನನ್ನದಾಗಿರಲಿ ಎಂಬ ಎಸ್.ಪಿ.ಬಿ ಅವರ ಗಾಯನದಂತೆ ಎಲ್ಲೇ ಇರಲಿ ಹೇಗೆ ಇರಲಿ ನಮ್ಮ ಉಸಿರಲ್ಲಿ ಕನ್ನಡ ಸದಾ ಅಚ್ಚ ಹಸಿರಾಗಿರಲಿ ಎಂಬುದು ನಮ್ಮೆಲ್ಲರ ಆಶಯ.

ಇತಿಹಾಸ :

ಆಲೂರು ವೆಂಕಟರಾವ್ ಅವರು 1905 ರಲ್ಲಿಯೇ ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ರಾಜ್ಯವನ್ನು ಏಕೀಕರಿಸುವ ಕನಸು ಕಂಡ ಮೊದಲ ವ್ಯಕ್ತಿ. 1950ರಲ್ಲಿ ಭಾರತವು ಗಣರಾಜ್ಯವಾಯಿತು ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ಮಾತನಾಡುವ ಭಾಷೆಯ ಆಧಾರದ ಮೇಲೆ ದೇಶದಲ್ಲಿ ವಿವಿಧ ಪ್ರಾಂತ್ಯಗಳನ್ನು ರಚಿಸಲಾಯಿತು ಮತ್ತು ದಕ್ಷಿಣ ಭಾರತದ ವಿವಿಧ ಸ್ಥಳಗಳನ್ನು ಒಳಗೊಂಡಂತೆ ಮೈಸೂರು ರಾಜ್ಯಕ್ಕೆ ಜನ್ಮ ನೀಡಿತು, ಇದನ್ನು ಮೊದಲು ರಾಜರು ಆಳಿದರು. 1 ನವೆಂಬರ್ 1956 ರಂದು, ಮೈಸೂರು ರಾಜ್ಯವು, ಹಿಂದಿನ ಮೈಸೂರು ಸಂಸ್ಥಾನದ ಬಹುಪಾಲು ಪ್ರದೇಶವನ್ನು ಒಳಗೊಂಡಿದ್ದು, ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳ ಕನ್ನಡ ಮಾತನಾಡುವ ಪ್ರದೇಶಗಳೊಂದಿಗೆ ವಿಲೀನಗೊಂಡಿತು ಮತ್ತು ಹೈದರಾಬಾದ್ ಸಂಸ್ಥಾನದೊಂದಿಗೆ ಏಕೀಕೃತ ಕನ್ನಡವನ್ನು ರಚಿಸಲಾಯಿತು. ಉತ್ತರ ಕರ್ನಾಟಕ, ಮಲೆನಾಡು (ಕೆನರಾ) ಮತ್ತು ಹಳೆಯ ಮೈಸೂರು ಹೀಗೆ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯದ ಮೂರು ಪ್ರದೇಶಗಳಾಗಿವೆ. ಹೊಸದಾಗಿ ಏಕೀಕೃತ ರಾಜ್ಯವು ಆರಂಭದಲ್ಲಿ "ಮೈಸೂರು" ಎಂಬ ಹೆಸರನ್ನು ಉಳಿಸಿಕೊಂಡಿತು,

ಕನ್ನಡ ರಾಜ್ಯೋತ್ಸವವೂ ಶುರು ರಾಜ್ಯದ ಹೆಸರು ಮೈಸೂರು. ಏಕೆಂದರೆ ಕರ್ನಾಟಕದ ಮೊದಲ ಸೃಷ್ಟಿ ಮೈಸೂರು ರಾಜ್ಯವನ್ನು ಆಧರಿಸಿತ್ತು. ಮೈಸೂರು ರಾಜ್ಯವನ್ನು 1 ನವೆಂಬರ್ 1973 ರಲ್ಲಿ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಾಗ ದೇವರಾಜ್ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದ ಏಕೀಕರಣಕ್ಕೆ ಮನ್ನಣೆ ನೀಡಿದ ಇತರ ವ್ಯಕ್ತಿಗಳಲ್ಲಿ ಸಾಹಿತಿಗಳಾದ ಕೆ. ಶಿವರಾಮ ಕಾರಂತ್, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎ.ಎನ್. ಕೃಷ್ಣರಾವ್ ಮತ್ತು ಬಿ. ಎಂ.ಶ್ರೀಕಂಠಯ್ಯ ಸೇರಿದ್ದಾರೆ.

ಹಳದಿ – ಕೆಂಪು ಬಾವುಟ ನಮ್ಮದು :

ಕರ್ನಾಟಕ ರಾಜ್ಯವು ತನ್ನದೇ ಆದ ಹಳದಿ–ಕೆಂಪು ಬಣ್ಣದ ಸಾಂಸ್ಕೃತಿಕ ಬಾವುಟವನ್ನು ಹೊಂದಿದೆ. ಹಿಂದಿನ ಕಾಲದ ಕನ್ನಡ ಹೋರಾಟಗಾರ ಎಂ. ರಾಮಮೂರ್ತಿಯವರ ಈ ಹಳದಿ–ಕೆಂಪು ಬಾವುಟವನ್ನು ಪ್ರಥಮ ಬಾರಿಗೆ ತಯಾರಿಸಿ ಬಳಸಿದ್ದರು. ಅಂದಿನಿಂದ ಈ ಬಾವುಟ ಕೋಟ್ಯಂತರ ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿದೆ.

ರಾಜ್ಯೋತ್ಸವ ದಿನವು ವರ್ಣರಂಜಿತ ಆಚರಣೆಯಾಗಿದ್ದು, ಕರ್ನಾಟಕದಾದ್ಯಂತ ರಾಜ್ಯ ಧ್ವಜದ ಕೆಂಪು ಮತ್ತು ಹಳದಿಗಳನ್ನು ಪ್ರದರ್ಶಿಸಲಾಗುತ್ತದೆ. ರಾಜ್ಯದ ಮುಖ್ಯಮಂತ್ರಿಗಳು ರಾಜ್ಯ ಧ್ವಜಾರೋಹಣ ಮತ್ತು ಭಾಷಣ ಮಾಡುವ ಪ್ರಮುಖ ಆಚರಣೆಗಳು ನಡೆಯುತ್ತವೆ. ಇದರ ಜೊತೆಗೆ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಕರ್ನಾಟಕ ಸರ್ಕಾರವು ಘೋಷಿಸುತ್ತದೆ, ಇದು ರಾಜ್ಯದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಎಂದು ಪರಿಗಣಿಸಲ್ಪಟ್ಟಿದೆ.

ವಿದೇಶಗಳಲ್ಲೂ ಕನ್ನಡದ ಕಂಪು :

ದೇಶ–ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ತಾವಿದ್ದಲ್ಲಿಯೇ ಅತ್ಯಂತ

25ನೇ ಪುಟಕ್ಕೆ.....

ವೃಕ್ಷಾಸನ

– ಡಾ. ದಾಕ್ಷಾಯಣಿ

ಅರ್ಥ : ವೃಕ್ಷ ಎಂದರೆ ಮರ ಎಂದರ್ಥ. ಮರದ ರೀತಿಯಲ್ಲಿ ಸ್ಥಿರವಾಗಿ ನಿಲ್ಲುವಂಥದ್ದು, ಮರ ಸ್ಥಿರವಾಗಿ ಇರಬೇಕೆಂದಲ್ಲಿ ತನ್ನ ಬೇರುಗಳನ್ನು ಎಷ್ಟು ಆಳಕ್ಕೆ ಬಿಟ್ಟಿರುತ್ತದೆಯೊ ಅಷ್ಟು ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತದೆ. ಯಾವುದೇ ರೀತಿಯ ಗಾಳಿ, ಮಳೆ ಎಂತದೇ ಬಂದರೂ ಕೂಡ ಅದು ಬೀಳುವ ಸಂಭವ ಕಡಿಮೆ ಇರುತ್ತದೆ. ಯಾವ ಮರಗಳು ಬೇರುಗಳನ್ನು ಆಳವಾಗಿ ಬಿಟ್ಟಿರುವುದಿಲ್ಲವೋ ಅಂತಹ ಮರಗಳು ಬೇಗ ಧರೆಗುರುಳುವ ಸಂಭವ ಹೆಚ್ಚು. ಅದೇ ರೀತಿ ಈ ಆಸನದಲ್ಲಿ ಒಂಟಿಕಾಲಿನಲ್ಲಿ ನಿಲ್ಲುವುದರಿಂದ ಯಾವ ಕಾಲನ್ನು ನೆಲಕ್ಕೆ ಒತ್ತಿರುತ್ತೇವೆಯೋ ಅದನ್ನು ಚೆನ್ನಾಗಿ ನೆಲಕ್ಕೆ ಒತ್ತಬೇಕು. ಮರ ಆಳಕ್ಕೆ ಬೇರುಗಳನ್ನು ಬಿಡುವ ರೀತಿಯಲ್ಲಿ ಅಂಗಾಲಿನ ಭಾಗವನ್ನು ಸಂಪೂರ್ಣವಾಗಿ ಒತ್ತಬೇಕು.

ವಿವರಣೆ : ಮೊದಲು ಸಮಸ್ಥಿತಿಯಲ್ಲಿ ನಿಂತುಕೊಳ್ಳಬೇಕು. ಈಗ ಬಲಗಾಲನ್ನು ಮೇಲೆ ತೆಗೆದುಕೊಳ್ಳಬೇಕು. ಎಡತೊಡೆಯ ಮೂಲಕ್ಕೆ ಬಲಹಿಮ್ಮಡಿಯನ್ನು ತಾಗಿಸಬೇಕು. ಕಾಲುಬೆರಳುಗಳು ಕೆಳಮುಖ ವಾಗಿರಬೇಕು.

ಮಂಡಿ ಸೊಂಟದ ನೇರಕ್ಕೆ ಇರಬೇಕು. ಎಡತೊಡೆಯಿಂದ ಬಲಪಾದವನ್ನು ಬಲಪಾದದಿಂದ ಎಡ ತೊಡೆಯನ್ನು ಒಂದಕ್ಕೊಂದು ಒತ್ತುತ್ತಿರಬೇಕು. ಈಗ ಎರಡೂ ಕೈಗಳು ನಿಧಾನ ಮೇಲಕ್ಕೆ ಭುಜದ ನೇರಕ್ಕೆ ಅಯೋಗ್ಯೆಗಳನ್ನು ಮೇಲ್ಮುಖ ಮಾಡಿ ಉಸಿರನ್ನು ತೆಗೆದುಕೊಳ್ಳುತ್ತ ಎರಡು ಕೈಗಳು ಮೇಲೆ ನಮಸ್ಕಾರ ಕೈಗಳನ್ನು ಕೆಳಗಡೆ ಇಳಿಸಬೇಕು. ಎರಡೂ ಕೈಗಳು ಸೊಂಟದ ಮೇಲೆ ತಂಡ ನಂತರ ಬಲಪದವನ್ನು ಕೆಳಗಿಳಿಸಬೇಕು. ಸಮಸ್ಥಿತಿ, ಇದೆ ರೀತಿಯಲ್ಲಿ ಎಡಗಾಲಿನಿಂದ ಮುಂದುವರೆಸುವುದು.

ಉಪಯೋಗ ; ಕಾಲುಗಳು ಬಲಿಷ್ಟವಾಗುವುವು. ತೊಡೆಗಳಲ್ಲಿನ ಕೊಬ್ಬುನಂಶ ಕರಗುವುದು. ನೆನಪಿಸಶಕ್ತಿ ಹೆಚ್ಚಾಗುವುದು.

ತಾಡಾಸನ

ಅರ್ಥ : ತಾಡ ಎಂದರೆ ಬೆಟ್ಟ ಎಂದರ್ಥ. ಬೆಟ್ಟದ ರೀತಿಯಲ್ಲಿ ಸ್ಥಿರತೆ ಕಾಪಾಡಿಕೊಳ್ಳುವಂತಹ ಸ್ಥಿತಿ ಇದಾಗಿರುವುದರಿಂದ ಇದಕ್ಕೆ ತಾಡಾಸನವೆಂದು ಕರೆಯುತ್ತಾರೆ.

ವಿವರಣೆ :

ತಾಡಾಸನದಲ್ಲಿ ಮೊದಲಿಗೆ ಸಮಸ್ಥಿತಿಯಲ್ಲಿ ನಿಂತುಕೊಳ್ಳಬೇಕು. ನಂತರ ಎರಡೂ ಕೈಗಳನ್ನು ನಿಧಾನವಾಗಿ ಮೇಲಕ್ಕೆ ತೆಗೆದುಕೊಳ್ಳಬೇಕು. ಭುಜದ ನೇರಕ್ಕೆ ಭುಜದ ಪಕ್ಕದಲ್ಲಿ ಎರಡೂ ಕೈಗಳನ್ನು ಭುಜದ ನೇರದಲ್ಲಿ ಪಕ್ಕದಲ್ಲಿ ಹಿಗ್ಗಿಸಬೇಕು. ನಂತರ ಅಂಗೈಗಳನ್ನು ಮೇಲ್ಮುಖ ಮಾಡಿ ಈಗ ಮತ್ತೊಮ್ಮೆ ಉಸಿರನ್ನು ತೆಗೆದುಕೊಳ್ಳುತ್ತ ನಿಧಾನವಾಗಿ ಎರಡೂ ಕೈಗಳನ್ನು ಭುಜದ ನೇರದಲ್ಲಿ ತೆಗೆದುಕೊಳ್ಳಬೇಕು. ಎರಡೂ ಕೈಗಳು ಮೇಲೆ ನಮಸ್ಕಾರ ಸ್ಥಿತಿ, ದೃಷ್ಟಿ ಮುಂದೆ ಇರಬೇಕು. ಎರಡೂ ರಟ್ಟೆಗಳನ್ನು ಕಿವಿಯ ಹಿಂದಕ್ಕೆ ತೆಗೆದುಕೊಳ್ಳಬೇಕು. ಮೇಲೆ ಹಸ್ತವನ್ನು ಒತ್ತಿರಬೇಕು. ಕಿರುಬೆರಳಿನ ಕೆಳಭಾಗ ಅಂಗೈನ ಕೆಳಭಾಗಳು ಒಂದಕ್ಕೊಂದು ಒತ್ತಿರಬೇಕು. ಸೊಂಟದ ಭಾಗವನ್ನು ಕೆಳಗೆ ಮತ್ತು ಮುಂದಕ್ಕೆ ಎಳೆಯುತ್ತಿರಬೇಕು. ನಾಭಿಯ ಭಾಗವನ್ನು ಒಳಗೆ ಎಳೆದಿರಬೇಕು. ಎರಡು ಪಕ್ಕೆಲುಬಿನ ಭಾಗಗಳನ್ನು ಹಿಗ್ಗಿಸಿರಬೇಕು.

ಉಪಯೋಗ :

ತಾಡಾಸನದಿಂದ ಎತ್ತರ ಬೆಳೆಯಲು ಸಹಾಯವಾಗುವುದು ಮತ್ತು ಹೆಸರೇ ಸೂಚಿಸುವಂತೆ ಬೆಟ್ಟದಂತೆ ಮನಸ್ಸು ಸ್ಥಿರವಾಗುವುದು. ಕಿಬ್ಬೊಟ್ಟೆಯಲ್ಲಿನ ಕೊಬ್ಬಿನಾಂಶ ಕರುಗುವುದು.

.....24ನೇ ಪುಟದಿಂದ

ಸಂಭ್ರಮದಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ತಾಯಿ ಭುವನೇಶ್ವರಿಯನ್ನು ಪೂಜಿಸುತ್ತಾರೆ. ಅಮೇರಿಕ, ಆಸ್ಟ್ರೇಲಿಯಾ, ಇಂಗ್ಲೇಂಡ್ ಮುಂತಾದ ದೇಶಗಳ ಕನ್ನಡಿಗರು ಕೆಲಸ ಮಾಡುವ ದೊಡ್ಡ ದೊಡ್ಡ ಸಂಸ್ಥೇಗಳಲ್ಲೂ ಕನ್ನಡ ರಾಜ್ಯೋತ್ಸವದ ಆಚರಣೆ ಸಂಭ್ರಮ ಮನೆ ಮಾಡಿರುತ್ತದೆ.

ಐಟಿ ಕಂಪನಿಗಳಲ್ಲೂ ಕನ್ನಡದ ಕಂಪು :

ಹಲವಾರು ಐಟಿ ಕಂಪನಿಗಳ ಕೇಂದ್ರವಾಗಿರುವ ಬೆಂಗಳೂರಿನ ಪ್ರಮುಖ ಸಂಸ್ಥೆಗಳಾದ ಟಿಸಿಎಸ್, ಐಬಿಎಂ, ಥಾಮ್ಸನ್ ರಾಯಿಟರ್ಸ್, ವಿಪ್ರೋ, ರಾಬರ್ಟ್ ಬಾಷ್, ಎಸ್‌ಎಪಿ ಲ್ಯಾಬ್ಸ್, ಅಕ್ಸೆಂಚರ್, ಅಲ್ಕಾಟೆಲ್–ಲುಸೆಂಟ್ ಮತ್ತು ಇನ್ಫೋಸಿಸ್‌ಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಉದ್ಯೋಗಿಗಳಿಗೆ ಸ್ಥಳೀಯ ಒಲವನ್ನು ಪ್ರದರ್ಶಿಸಲು ಪ್ರೋತ್ಸಾಹಿಸುತ್ತವೆ. ಐಟಿ ಜನಸಮೂಹವು ಕೆಲಸದ ಸ್ಥಳಗಳಿಗೆ ಕನ್ನಡದ ವಿಷಯದ ಟೀ–ಶರ್ಟ್‌ಗಳನ್ನು ಧರಿಸುವ ಮೂಲಕ ತಮ್ಮ ಬೆಂಬಲವನ್ನು ತೋರಿಸುತ್ತದೆ.

ಉಪಸಂಹಾರ :

ಸರ್ವ ಜನಾಂಗದ ಶಾಂತಿಯ ತೋಟ ನಮ್ಮ ನಾಡು. ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬಂತೆ ನಾವು ದೇಶದ ಯಾವುದೇ ಮೂಲೆಯಲ್ಲಿದ್ದರು ಕನ್ನಡವನ್ನು ಉಳಿಸಿ, ಬೆಳೆಸುವ ಸಂಸ್ಕೃತಿ ಪ್ರತಿಯೊಬ್ಬನ ಕನ್ನಡಿಗನದಾಗಲಿ.

"ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ"

ಸಹಕಾರ ಸಂಘಗಳಲ್ಲಿ 'ಸಹಕಾರ ಮೌಲ್ಯ'ಗಳ ಪಾಲನೆಯ ಅಗತ್ಯತೆ.

– ಶ್ರೀ ಶಶಿಧರ. ಎಲೆ. ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಸಹಕಾರ ಸಂಘಗಳು ಆರಂಭವಾದದ್ದು 19ನೇ ಶತಮಾನದ ಮಧ್ಯದಲ್ಲಿ, 'ಕೈಗಾರಿಕೆ ಕ್ರಾಂತಿ'ಯ ಫಲವಾಗಿ ಉಂಟಾದ ಪಲ್ಲವ ಗಳಲ್ಲಿ 'ಸಹಕಾರ ಕ್ರಾಂತಿ' ಚಳುವಳಿಯೂ ಒಂದು. ಕೈಗಾರಿಕೆ ಕಾರ್ಮಿಕರ ಶ್ರಮವನ್ನು ಅವಲಂಭಿಸಿತ್ತು. ಆದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದಾಗ ಅವರು ತಮ್ಮ ಬದುಕಿನ ಅವಶ್ಯಕತೆಗೆ ಅವರು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ. ಇಂಗ್ಲೆಂಡ್ ನ ಮ್ಯಾಟೆಸ್ಟರ್ ಪಟ್ಟಣದ ಟೋಡ್ ಲೇನ್ ನಲ್ಲಿ ಕಾರ್ಮಿಕರು ಸಂಘಟಿತಗೊಂಡು ಸಹಕಾರ ಸಂಘ ಸ್ಥಾಪಿಸಿದರು. ಅವರೇ 'ರಾಕ್ ಡೇಲ್ ಅಗ್ರಗಾಮಿಗಳು ' (Roch dale pioneers). ಇವರು ತಮ್ಮ ಸಹಕಾರ ಸಂಘವನ್ನು ನಡೆಸಲು ತಾವೇ ಕೆಲವೊಂದು ನೀತಿ ನಿಯಮಗಳನ್ನು ರಚಿಸಿಕೊಂಡರು. ಈ ನೀತಿ ನಿಯಮಗಳೇ ಕಾಲಕ್ರಮೇಣ 'ಸಹಕಾರ ತತ್ವ' ಗಳಾದವು. ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆ (International cooperative AllianceICA) ಈ ತತ್ವಗಳನ್ನು ಅನುಸರಿಸುವಂತೆ ವಿಶ್ವದ ಸಹಕಾರ ಚಳುವಳಿಗೆ ದಿಕ್ಸೂಚಿಯಾಗಿ ನೀಡಿದೆ. ಕಾಲಕಾಲಕ್ಕೆ ತಕ್ಕಂತೆ ಅದರ ಬದಲಾವಣೆಗಳನ್ನು ಮಾಡುತ್ತಾ ಬಂದಿದೆ. ಪ್ರಸ್ತುತ 1994 ರ ಸಮ್ಮೇಳನದಲ್ಲಿ ಅಳವಡಿಸಿಕೊಂಡ ಏಳು (7) ತತ್ವಗಳನ್ನು ಪಾಲಿಸಲಾಗುತ್ತಿದೆ. ಅದರಂತೆ ಸಹಕಾರ ಕಾಯ್ದೆ' ಕಾನೂನು, ಉಪ ನಿಯಮಗಳು, ವ್ಯವಹಾರಗಳು ನಡೆಯುವ ಅವಶ್ಯಕತೆ ಸಹಕಾರ ಚಳುವಳಿ ದೃಷ್ಟಿಯಿಂದ ಅತಿಅವಶ್ಯ. ಇದೇ ಸಮ್ಮೇಳನವು ಸಹಕಾರ ಸಂಘಗಳ ಅಭ್ಯುದಯಕ್ಕೆ ಮತ್ತು ಒಟ್ಟಾರೆ ಸಹಕಾರ ಚಳುವಳಿಯ ಉತ್ತಮ ಬೆಳವಣಿಗೆ ದೃಷ್ಟಿಯಿಂದ ನಾಲ್ಕು 'ಸಹಕಾರ ಮೌಲ್ಯ' ಗಳನ್ನು ಪಾಲಿಸಲು ಪ್ರತಿಪಾದಿಸಿತು.

ಈ 'ಸಹಕಾರ ಮೌಲ್ಯ' ಗಳು ಈ ಕೆಳಕಂಡಂತಿವೆ.

(1) ಸ್ವ ಸಹಾಯ ಮತ್ತು ಪರಸ್ಪರ ಸಹಾಯ. Self help and mutual help.

(2) ಸ್ವಯಂ ಜವಾಬ್ದಾರಿ. Self responsiblity.

(3) ಪ್ರಜಾಪ್ರಭುತ್ವ. Democracy.

(4) ಸಮಾನತೆ, ಬಂಡವಾಳ , ಮತ್ತು ಒಗ್ಗಟ್ಟು . Equality, Equity, and solidarity.

ಈ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಸಹಕಾರ ಸಂಘದ ಭಾಗೀದಾರರೆಲ್ಲರೂ ಅಳವಡಿಸಿಕೊಂಡು ಆಚರಣೆಗೆ ತಂದು ಅನುಷ್ಠಾನಗೊಳಿಸಿದ್ದೇ ಆದಲ್ಲಿ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಚರಣೆಗೊಳ್ಳುವುದಲ್ಲದೇ ಸಹಕಾರ ಚಳುವಳಿಯು ತನ್ನ ಅಂತಿಮ ಗುರಿಯಾದ ಸದಸ್ಯರ ಆರ್ಥಿಕ ಪ್ರಗತಿ, ಸಾಮಾಜಿಕ ಏಳ್ಗೆ, ಸಾಂಸ್ಕೃತಿಕ ಅಭಿವೃದ್ಧಿ ಯಾಗಲು ಕಾರಣವಾಗುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಮೌಲ್ಯವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಂಡು ಅಳವಡಿಸಿಕೊಂಡಲ್ಲಿ ಸಹಕಾರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ಮೌಲ್ಯಗಳನ್ನು 'ಸಹಕಾರ ಸಂಘ'ದ ಭಾಗೀದಾರರುಗಳಾದ (1) ಸದಸ್ಯರು (2) ಆಡಳಿತ ಮಂಡಳಿ (3) ಸಿಬ್ಬಂದಿ ವರ್ಗದವರು ಪಾಲಿಸಬೇಕಾಗುತ್ತದೆ.

(1) ಸ್ವಸಹಾಯ ಮತ್ತು ಪರಸ್ಪರ ಸಹಾಯ. : ಸಹ+ ಕಾರ= ಸಹಕಾರ, ಯಾವುದೇ ಕಾರ್ಯವನ್ನು ಒಬ್ಬರು ಮಾಡಲಾಗುವುದಲ್ಲಿ ಮೋ ಆ ಕಾರ್ಯವನ್ನು ಎಲ್ಲರೂ ಒಟ್ಟುಗೂಡಿ ಮಾಡುವುದೇ ಸಹಕಾರ. ತನ್ನ ಸ್ವಯಂ ಅಭಿವೃದ್ಧಿಗೆ ತಾನು ಶ್ರಮಿಸಬೇಕು ಜೊತೆ ಜೊತೆಗೆ ಇತರರನ್ನು ತನ್ನೊಡನೆ ಇತರರನ್ನು ಒಳಗೊಳ್ಳಬೇಕು. ತನಗೆ ತಾನು ಸಹಾಯ ಮಾಡಿಕೊಳ್ಳುವುದಲ್ಲದೇ ತನ್ನೊಡನೆ ಇರುವ , ತನ್ನಂತೆ ಇರುವ ಇತರೆ ಸದಸ್ಯರಿಗೆ ಕೂಡ ತಾನು ಅನುಸರಿಸಿದ ರೀತಿ ,ನೀತಿ, ಮಾರ್ಗೋಪಾಯಗಳನ್ನು ತೋರಿಸಿ ಕೊಡುವುದು. 'ಕಾಗೆ ಒಂದುಗಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿ ಒಂದು ಕುಟುಕ ಕಂಡೊಡೆ ಕೂಗಿ ಕರೆಯದೆ ತನ್ನ ಕುಲವೆನ್ನವ?' ಎಂಬ ಬಸವಣ್ಣನವರ ವಚನೋಕ್ತಿ ನೆನಪಿಗೆ ಬರುತ್ತದೆ. ಈ ಮೌಲ್ಯ ಕ್ಕೆ ಸರಿಹೊಂದುವಂತೆ ಈ ಹಿಂದೆ ' (ಷೇರು)ಹೂಡಿಕೆ ಮೇಲೆ ಪರಿಮಿತ ಲಾಭಾಂಶ (ಡಿವಿಡೆಂಡ್)', ಎಂಬ ಸಹಕಾರ ತತ್ವ ಅಡಕವಾಗಿತ್ತು. ಸಂಘದ (ಸದಸ್ಯರ) ಭವಿಷ್ಯದ ಒಳಿತಿಗಾಗಿ ಆಪದ್ಧನ ಸೃಷ್ಟಿ, ಸಂಘದ ವ್ಯಾಪಾರವು ಸದಸ್ಯರ ನಡುವೆ ಇರುವಂತಹ ವ್ಯವಹಾರ. ಇದರಿಂದ 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' ಎಂಬುದು ಸಹಕಾರ ಸಂಘದ ಉದ್ದೇಶ. ಮತ್ತು ಎಲ್ಲರೂ ಬಲ್ಲ ನಾಣ್ನುಡಿ. ಸಿಟಿಜನ್ ಕೋ ಆಪರೇಟೀವ್ ಬ್ಯಾಂಕ್ vs ಆದಾಯ ತೆರಿಗೆ ಇಲಾಖೆ ಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಲಯ ಸ್ವಸಹಾಯ ಮತ್ತು ಪರಸ್ಪರ ಸಹಾಯ ಎಂಬುದು ಸಹಕಾರ ಸಂಘದ ಮೂಲಭೂತ ಅಂಶಗಳಲ್ಲಿ ಒಂದು ಎಂಬುದನ್ನು ಎತ್ತಿ ಹಿಡಿದಿದೆ. ಸದಸ್ಯರು ಸಂಘದ ಆಗು ಹೋಗುಗಳಲ್ಲಿ ಈ ಮೌಲ್ಯವನ್ನು ಪಾಲಿಸಬೇಕು. ಆಡಳಿತ ಮಂಡಳಿಯು ಈ ಮೌಲ್ಯವನ್ನು ಕಾಪಿಡುವಂತೆ ತಮ್ಮ ನಿರ್ಧಾರ, ನಿಲುವು, ನೀತಿಗಳಲ್ಲಿ ಅಳವಡಿಸಿಕೊಳ್ಳಬೇಕು.

(2) ಸ್ವಯಂ ಜವಾಬ್ದಾರಿ ; ಈ ಮೌಲ್ಯವು ಅತ್ಯಂತ ಸತ್ವಯುತವಾದದ್ದು, ಯಾವುದೇ ಒಂದು ಸಂಸ್ಥೆಯಲ್ಲಿ, ಅಥವಾ ಒಂದು ಕುಟುಂಬದಲ್ಲೇ ಆಗಲಿ ಅದರ ಅಂಗಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದರೆ ಅದಕ್ಕಿಂತ ಹೆಚ್ಚಿನ ದು ಯಾವುದಿದೇ? 'ಅರಿವಿಗಿಂತ ಮಿಗಿಲುಂಟೆ' ಎಂಬ ವಚನೋಕ್ತಿ ನೆನಪಿಗೆ ಬರುತ್ತದೆ. ಒಂದು ಸಹಕಾರ ಸಂಸ್ಥೆಯಲ್ಲಿ ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ಮೂರು ಅಂಗಗಳು ಭಾಗೀದಾರರು ಇದರೊಡನೆ ಸಂಘದೊಡನೆ ವ್ಯವಹರಿಸುವರು ಸರಬರಾಜುದಾರರು ಇತರರನ್ನು ಭಾಗೀದಾರರೆಂದು ಪರಿಗಣಿಸಬಹುದು. ಈ ಎಲ್ಲ ಭಾಗೀಧಾರರೂ ತಮ್ಮ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳು (Roles and

Responsiblities) ಗಳನ್ನು ತಿಳಿದು (ಅರಿತು) ಅದರಂತೆ ನಡೆದು ಕೊಂಡರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚಿಂದ ಸರ್ವಜ್ಞ' ಎಂಬ ವಚನ ಸಾರ್ಥಕ ವಾದಂತೆ ಆಗುತ್ತದೆ. ಸಹಕಾರ ಸಂಘದ ಯಜಮಾನರು ಸಂಘದ ಸದಸ್ಯರು ಅದರ ಗ್ರಾಹಕರು ಕೂಡ ಅವರೇ ಆಗಿರುತ್ತಾರೆ ಎಂಬುದು ಅದರ ವೈಶಿಷ್ಟ್ಯ. ಸದಸ್ಯರು' ಸಂಘ ತನಗೇನು ಮಾಡಿದೆ ಎಂಬುದಕ್ಕಿಂತ ತಾನು ಸಂಘಕ್ಕೆ ಏನು ಮಾಡಿರುತ್ತೇನೆ ? ' ಎಂದು ಪ್ರಶ್ನಿಸಿಕೊಳ್ಳುವುದು ಸೂಕ್ತ. ಸದಸ್ಯ ತನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವುದೆಂದರೆ ತಾನು ಸಂಘದ ಚಟುವಟಿಕೆಗಳಲ್ಲಿ, ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಆಗಿದೆ. ಮೊದಲನೆಯದಾಗಿ ಸದಸ್ಯನಿಗೆ ಇರುವ ಹಕ್ಕು ಮತ್ತು ಅವಕಾಶನೆಂದರೆ ತಾನು ಸಾಮಾನ್ಯ ನಿಕಾಯದ ಭಾಗವಾಗಿ ಸಂಘದ ವಾರ್ಷಿಕ ಮತ್ತು ವಿಶೇಷ ಮಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ವಾರ್ಷಿಕ ವರದಿ, ಲೆಕ್ಕ ಪರಿಶೋಧನ ವರದಿ, ಯೋಜನೆ ವರದಿ, ಆಯ–ವ್ಯಯ , ಅಂತಿಮ ಲೆಕ್ಕಗಳು, ಇವುಗಳ ಅಧ್ಯಯನ , ಸದಸ್ಯರ , ಆಡಳಿತ ಮಂಡಳಿ, ಸಿಬ್ಬಂದಿ ನೀತಿ ನಡವಳಿಕೆಗಳನ್ನು ರೂಪಿಸುವಲ್ಲಿ ಸಹಕರಿಸುವದು. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ, ಚಿಕಿತ್ಸಕಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಭಾಗಿಯಾಗುವುದು. ಚುನಾವಣೆಯಲ್ಲಿ ಭಾಗವಹಿಸುವುದು. ಮತದಾನ ಮಾಡುವುದು ಪ್ರಜ್ಞಾವಂತ, ಜವಾಬ್ದಾರಿಯತ, ಕ್ರಿಯಾಶೀಲ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಅದರ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಇದರಿಂದ ಸದಸ್ಯರು ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಇದರಂತೆ ' ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಭಾಗವಹಿಸುವಿಕೆ' ಎಂಬುದನ್ನು ಸಹಕಾರ ತತ್ವವಾಗಿ ಪರಿಗಣಿಸಲಾಗಿದೆ. ಇದರ ಪಾಲನೆಯಾಗದೆ ಸಂಘ ದ ವ್ಯವಹಾರಗಳನ್ನು ಹಿಗ್ಗಿಸಲಾಗುವುದಿಲ್ಲ. ಸಂಘ ಯಶಸ್ಸು ಗಳಿಸಲಾಗುವುದಿಲ್ಲ. ಸಹಕಾರ ಚಳುವಳಿ ಕುಂಟಿತಗೊಳ್ಳುತ್ತದೆ. ಇದರಿಂದಾಗಿ ಕಾಯ್ದೆ ಭಾಗವಾಗಿ ಮತದಾನ ಹಕ್ಕು ಪಡೆಯ ಬೇಕಾದಲ್ಲಿ ಮಹಾಸಭೆಯಲ್ಲಿ ಭಾಗವಹಿಸುವುದು, ಕನಿಷ್ಠ ಸೇವೆ ಸೌಲಭ್ಯ ಪಡೆಯುವುದನ್ನು ಕಡ್ಡಾಯ ಗೊಳಿಸಲಾಗಿರುತ್ತದೆ. ಎಲ್ಲ ಸದಸ್ಯರು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದುಕೊಂಡಲ್ಲಿ ಸಹಕಾರ ಸಂಘಗಳು 'ಸದಸ್ಯ ಚಾಲಿತ' (member driven) ಸಹಕಾರ ಸಂಘಗಳು ನಿರ್ಮಾಣವಾಗುವಲ್ಲಿ ಸಂಶಯವಿಲ್ಲ.

ಆಡಳಿತ ಮಂಡಳಿಯು ಸ್ವಯಂ ಆಗಿ ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ತನ್ನ ಪಾತ್ರ ವನ್ನು ತಾನು ನಿರ್ವಹಿಸಿದಲ್ಲಿ ಸಹಕಾರ ಸಂಘ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಯೇ ತೀರುತ್ತದೆ. ಸಹಕಾರ ಸಂಘದ ಚುಕ್ಕಾಣಿ ಇರುವುದೇ ಆಡಳಿತ ಮಂಡಳಿಯಲ್ಲಿ. ಆಡಳಿತ ಮಂಡಳಿಯು ತಾನು ಸದಸ್ಯರಿಗೆ, ತನ್ನನ್ನು ಆರಿಸಿ ಆಡಳಿತದ ಜವಾಬ್ದಾರಿಯನ್ನು ವಹಿಸಿರುವ ಸದಸ್ಯರಿಗೆ ಹೊಣೆಗಾರ ಎಂಬುದನ್ನು ಅರಿತು ನಡೆಯುವುದು ಬಹು ಮುಖ್ಯ. ತನ್ನ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳೇನು? ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆಗಳ ಪೂರೈಕೆಗಾಗಿ ತಾನು ತೆಗೆದುಕೊಂಡ ಕ್ರಮಗಳೇನು? ಎಂಬ ಆತ್ಮವಿಮರ್ಶೆ ಅತ್ಯಗತ್ಯ. ಆಡಳಿತ ಮಂಡಳಿ ಸಭೆಗೆ ಹಾಜರಾಗುತ್ತಿದ್ದೇನೆಯೇ? ಸಭೆಗೆ ಪೂರ್ವ ತಯಾರಿಯೊಡನೆ ಹಾಜರಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದನೆಯೇ? ಸಂಘದ ಕಾರ್ಯಾಚರಣೆ ಲಾಭದಾಯಕವಾಗಿ ನಡೆಯುತ್ತಿದೆಯೇ? ಲೆಕ್ಕ ಪತ್ರಗಳು ಸರಿಯಾಗಿ ನಿರ್ವಹಣೆಯಾಗುತ್ತಿದೆಯೇ? ಅಂತಿಮ ಲೆಕ್ಕಗಳ ಫಲಿತಾಂಶಗಳೇನು? ಸಂಘದ ನಿಧಿಗಳ ನಿರ್ವಹಣೆ ಯಾವ ರೀತಿ ಆಗುತ್ತಿದೆ? ಆಸ್ತಿ–ಜವಾಬ್ದಾರಿ ನಿರ್ವಹಣೆ ಹೇಗೆ ನಡೆಯುತ್ತಿದೆ? ಇದರ ಬಗ್ಗೆ ಹಿಮ್ಮಾಹಿತಿ (feed back) (MIS - Monitoring information system) ಪಡೆಯಲಾಗುತ್ತಿದ್ದಯೆ?. ಇದರ ಪರಿಶೀಲನೆ ಯಾಗುತ್ತಿದೆಯೇ?

ತಪ್ಪು ಒಪ್ಪುಗಳು ಕಂಡು ಬರುತ್ತಿದ್ದಾವೆಯೇ? ಸೂಕ್ತ ಸರಿಪಡಿಸುವ , ಚಿಕಿತ್ಸಾ ಕ್ರಮಗಳೇನು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಜವಾಬ್ದಾರಿ ಆಡಳಿತ ಮಂಡಳಿ ಯದ್ದಾಗಿರುತ್ತದೆ. ಆಡಳಿತ ಮಂಡಳಿಯು ತನ್ನ ನಿರ್ಧಾರಗಳಲ್ಲಿ ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಮಾಡಿಕೊಡದೆ ಪಾರದರ್ಶಕ ತೆಯಿಂದ ವರ್ತಿಸಿದ್ದಲ್ಲಿ, ತನ್ನ ತೀರ್ಮಾನಗಳು ಎಲ್ಲರನ್ನು ಒಳಗೊಂಡು , ಸಕಲರ ಪಾಲ್ಗೊಳ್ಳುವಿಕೆ ಯಿಂದ ತೆಗೆದುಕೊಂಡ ತಿರ್ಮಾನವೇ ಆದರೆ ಅದರ ಅನುಷ್ಠಾನವು ಸುಲಭವಾಗುತ್ತದೆ ಮತ್ತು ಯಶಸ್ವಿಯಾಗುತ್ತದೆ. ತೀರ್ಮಾನವು ಮುಂದಾಲೋಚನೆ ,ದೂರದಶ್ವಿತ್ವದಿಂದ ಕೂಡಿರಬೇಕು. ಅದರ ಆಗು ಹೋಗುಗಳ (pros-cons) ಬಗ್ಗೆ ಅರಿವಿರಬೇಕು. ಮಿಗಿಲಾಗಿ ತಾವು ಸದಸ್ಯರಿಗೆ (ಮಹಾಸಭೆಗೆ) ಹೊಣೆಗಾರರು ಎಂಬುದನ್ನು ಮರೆಯಲಾಗದು. ಇಂತಹ ಪ್ರಜ್ಞಾವಂತ, ಪ್ರಬುದ್ಧ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಸಹಕಾರ ಸಂಘ, ಒಟ್ಟಾರೆ ಸಹಕಾರ ಚಳುವಳಿ ಯಶಸ್ವಿಯಾಗುವಲ್ಲಿ ಯಾವುದೇ ಸಂಶಯ ವಿರುವದಿಲ್ಲ.

ಮತ್ತೊಂದು ಪ್ರಮುಖ ಅಂಗ ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ಒಳಗೊಂಡಂತೆ ಸಿಬ್ಬಂದಿ ವರ್ಗ. ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ನೌಕರನು/ಳು ಅತ್ಯಂತ ಪ್ರಮುಖ ವ್ಯಕ್ತಿ. ಅದರಲ್ಲಿ ಮೇಲು ಕೆಳಗೆ ಎಂಬ ಪ್ರಶ್ನೆಯಿಲ್ಲ. ಯಾರೂ ಅಮುಖ್ಯರಲ್ಲ. ಆಡಳಿತದ ದೃಷ್ಟಿಯಿಂದ ,ಒಂದು ನಿಯಂತ್ರಣ ವ್ಯವಸ್ಥೆಗಾಗಿ ಸಿಬ್ಬಂದಿ ಶ್ರೇಣಿ ನಿರ್ಮಾಣವಾಗುತ್ತಿರುತ್ತದೆ ವಿನಃ ಬೇರೆ ಅಥವ ಅನ್ಯತಾ ಉದ್ದೇಶವಿರುವುದಿಲ್ಲ. ಪ್ರತಿಯೊಬ್ಬ ನೌಕರರು ತಮ್ಮ ತಮ್ಮ ಜವಾಬ್ದಾರಿಗಳನ್ನು ವಹಿಸಿದ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ, ಸಕಾಲದಲ್ಲಿ ನಿರ್ವಹಣೆ ಮಾಡಿದಲ್ಲಿ ಅದಕ್ಕಿಂತ ಮಿಗಿಲಾದ ದೇನಿದೆ. ಸಂಘದ ಕಾರ್ಯಾಚರಣೆ ಸುಸೂತ್ರವಾಗಿ ತಾನೇ ತಾನಾಗಿ ನಡೆಯುತ್ತದೆ. ಸಹಕಾರ ಸಂಘದ ಯಶಸ್ಸು ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಅರಿತ ಸಿಬ್ಬಂದಿಯನ್ನು ಅವಲಂಭಿಸಿರುತ್ತದೆ . ಜ್ಞಾನವುಳ್ಳ, ಕೆಲಸದಲ್ಲಿ ನುರಿತ ಸಿಬ್ಬಂದಿಯಾಗಿದ್ದು, ಸಂಘದ ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆ ಈಡೇರಿಸಬೇಕೆಂಬ ಗುಣಾತ್ಮಕ ಮನೋ ಚಿಂತನೆ ಉಳ್ಳವರಾಗಿದ್ದರೆ, ಅವರು ಆಡಳಿತ ಮಂಡಳಿಗೂ ದಿಕ್ಸೂಚಿಯಾಗಿ ವರ್ತಿಸಿ ಸಹಕಾರ ಸಂಘವನ್ನು ಯಶಸ್ವಿಗೊಳಿಸಬಲ್ಲರು ಎಂಬುದು ಸರ್ವಕಾಲಿಕ ಸತ್ಯ.

ಇನ್ನು ಸಂಘದ ಸರಬರಾಜುದಾರರು, ಇನ್ನಿತರ ಸೇವೆ ಸೌಕರ್ಯಗಳನ್ನು ಸಂಘಕ್ಕೆ ಒದಗಿಸುವವರೂ ಸಂಘವು ವಹಿಸಿರುವ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2020-2022.

ಜವಾಬ್ದಾರಿಯನ್ನು ತಾವು ನಿರ್ವಹಿಸಿದರೆ ಸಂಘದ ಕೆಲಸ ಕಾರ್ಯಗಳು ಸುಲಲಿತ ವಾಗಿ ನೆರವೇರುತ್ತವೆ. ಸಹಕಾರ ಸಂಘವು ಒಂದು ಯಶಸ್ವಿ ಸಹಕಾರ ಸಂಘ ಎಂದೆನಿಸಿಕೊಳ್ಳುತ್ತದೆ.

(3) ಪ್ರಜಾಪ್ರಭುತ್ವ ; ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳು. ಪ್ರಜ್ಞಾವಂತ ಜವಾಬ್ದಾರಿಯುತ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು ಪ್ರಜ್ಞಾವಂತ ಸದಸ್ಯರ ಜವಾಬ್ದಾರಿ ಯಾಗಿರುತ್ತದೆ. ಅತ್ಯುತ್ತಮ ನಾಯಕತ್ವ ಗುಣಗಳ ಬೆಳವಣಿಗೆಗೆ ಸಹಕಾರ ಸಂಸ್ಥೆಗಳು ಅವಕಾಶ ಒದಗಿಸುತ್ತವೆ. ಈ ಸಂಸ್ಥೆಗಳಲ್ಲಿ ಕೇವಲ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲದೇ ಸಂಸ್ಥೆಗಳು ಔದ್ಯೋಗಿಕ ಸಂಸ್ಥೆಗಳಾಗಿರುವುದರಿಂದ ವ್ಯವಹಾರಿಕ ಅಂಶಗಳು ಮೇ ಳೈಸಿರುವುದರಿಂದ ವ್ಯವಹಾರಿಕ ಜ್ಞಾನ, ಕೌಶಲ್ಯಗಳ ಕಲಿಕೆಗೆ ಸದಾವಕಾಶ ದೊರೆಯುತ್ತದೆ. ಪ್ರಜಾಪ್ರಭುತ್ವ ಮತ್ತು ನಾಯಕತ್ವ ಎರೆಡೂ ಅವಿಭಾಜ್ಯ ಶ್ರೇಷ್ಠ ನಾಯಕತ್ವವಿಲ್ಲದೇ ಪ್ರಜಾಪ್ರಭುತ್ವ ಬೆಳೆಯಲಾರದು ಅದರಂತೆ ಪ್ರಜಾಪ್ರಭುತ್ವ ಆಧರಿತ ಸಹಕಾರ ಸಂಸ್ಥೆಗಳು. 'ತಥಾ ರಾಜಾ ತಥಾ ಪ್ರಜಾ 'ಅಲ್ಲ ಪ್ರಜಾಪ್ರಭುತ್ವದಲ್ಲಿ 'ತಥಾ ಪ್ರಜಾ ತಥಾ ರಾಜ' ಎಂಬುದನ್ನು ಒಪ್ಪಿಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ಹೇಗೆ ಮುಖ್ಯವೋ ಹಾಗೆ ಸಹಕಾರ ಸಂಘಗಳಲ್ಲಿ ಸದಸ್ಯರು ಮುಖ್ಯರು, ಅವರೇ' ಸದಸ್ಯ ಚಾಲಿತ ಸಹಕಾರ ಸಂಘ'ವನ್ನು ರೂಪಿಸ ಬಲ್ಲರು.

(4) ಸಮಾನತೆ, ಬಂಡವಾಳ, ಒಗ್ಗಟ್ಟು ; ಈ ಸಹಕಾರ ಮೌಲ್ಯಗಳ ಪಾಲನೆ ಸಹಕಾರ ಸಂಘಗಳ ಸರ್ವೋತ ಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಸಹಕಾರ ಸಂಘದಲ್ಲಿ ಸದಸ್ಯರಲ್ಲರೂ ಸಮಾನರು. ಕೆಲವರು ಹೆಚ್ಚು ಸಮಾನರು ಕೆಲವರು ಕಡಿಮೆ ಸಮಾನರು ಎಂಬ ಪ್ರಶ್ನೆ ಉದ್ಭವಿಸಬಾರದು. ಸಹಕಾರ ಸಂಘಕ್ಕೆ ಸದಸ್ಯರಾದ ನಂತರ ಸಹಕಾರ ಸಂಘದಲ್ಲಿ ಅವರೆಲ್ಲರೂ ಸಮಾನರು, ಒಬ್ಬ ಸದಸ್ಯ ಎಷ್ಟೇ ಷೇರು ಹೊಂದಿದ್ದರೂ ಅವರಿಗೆ ಇರುವುದು ಒಂದೇ ಮತ. ಸಮಾನತೆ, ಸಮಾನ ಮನಸ್ಕರು, ಸಮಾನ ಚಿಂತನೆ ಅತಿ ಅವಶ್ಯ. ಭಿನ್ನಮತ ಸರ್ವೇ ಸಾಮಾನ್ಯ ಆದರೆ ಚಿಂತನ ಮಂಥನ ನಡೆದು ಸದಸ್ಯರ ಒಳಿತಿಗಾಗಿ ಅತ್ಯುತ್ತಮ ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲರೂ ಸಮಾನರು ಎನ್ನುವ ಮನೋಭಾವನೆ, ಚಿಂತನೆ, ಸಹಕಾರ ಸಂಘದ ಯಶಸ್ವಿ ಕಾರ್ಯಾ ಚರಣೆ ದೃಷ್ಟಿಯಿಂದ ಅತಿ ಅವಶ್ಯ.

ಬಂಡವಾಳವಿಲ್ಲದೇ ಯಾವುದೇ ವ್ಯವಹಾರ ಮಾಡಲಾಗುವುದಿಲ್ಲ. ಬಂಡವಾಳವಿಲ್ಲದಿದ್ದಲ್ಲಿ 'ಬಂಡವಾಳವಿಲ್ಲದ ಬಡಾಯಿ' ಟಿ.ಪಿ . ಕೈಲಾಸಂ ರವರ ನಾಟಕದ ತಾಗುತ್ತದೆ. ಅದರಲ್ಲಿಯೂ ಸಹಕರ ಸಂಘದಲ್ಲಿನ ಬಂಡವಾಳ ಒಂದು ರೀತಿ ಮೌಲ್ಯವರ್ಧಿತ ಬಂಡವಾಳ (equity) ಅದರಲ್ಲಿ ಪ್ರೀತಿ, ಪ್ರೇಮ, ನಮ್ಮ ಸಂಘ ನಮ್ಮದು ಮುಖಭಾವ, ಶ್ರಮ , ಕಷ್ಟಪಟ್ಟು ಗಳಿಸಿದ ಗಳಿಕೆ ಅಂಶಗಳು ಮೇಳೈಸಿದೆ. ಹಾಗಾಗಿ ಇದರ ಮಹತ್ವ ಅತಿ ಹೆಚ್ಚಿನದು. ಬಂಡವಾಳ ಕ್ರೌಡೀಕರಣ, ಬಂಡವಾಳಕ್ಕೆ ಬಂಡವಾಳದ ಸೇರ್ಪಡೆ, ಉಳಿಕೆ , ಅದರ ವಿವೇಚನಯುತ ವ್ಯವಹಾರ ಹೂಡಿಕೆ ಬಹು ಮುಖ್ಯ ವಿಚಾರವಾಗುತ್ತದೆ.

ಒಗ್ಗಟ್ಟು (solidarity) ಯಾವುದೇ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆ ಸಹಕಾರ ಸಂಘದಲ್ಲಿಯೂ ಕೂಡ. ಪಟ್ಟಭದ್ರ ಹಿತಾಸಕ್ತಿಗಳು, ಸಂಘಟನೆಯನ್ನು ಒಡೆಯಲು ಸದಾ ಹವಣಿಸುತ್ತಿರುತ್ತವೆ. ಸಹಕಾರ ಸಂಘವು ಈ ವಿಷಯಗಳಲ್ಲಿ ಅತಿ ಎಚ್ಚರಿಕೆ ಇಂದ ಇರತಕ್ಕದ್ದು. ಅನೇಕವೇಳೆ ಬಾಹ್ಯದಿಂದ ಅಲ್ಲದೇ ಆಂತರಿಕವಾಗಿ ನುಸುಳಿ ಯಶಸ್ವಿ ಕಾರ್ಯಾಚರಣೆಗೆ ಧಕ್ಕೆ ತರುವ, ಹಾಳುಗೆಡಹುವ ಕೆಲಸ ಮಾಡುತ್ತವೆ. ಇಂತಹ ದುಷ್ಟ ಶಕ್ತಿಗಳ ವಿರುದ್ಧ ಸಹಕಾರ ಸಂಘದ ಭಾಗೀಧಾರರೆಲ್ಲರೂ ಒಗ್ಗೂಡಿ ಕಾರ್ಯವೆಸುಗುವ ಶಕ್ತಿಯನ್ನು ಹೊಂದಿರ ಬೇಕು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಅರಿತು ಸಾಬೀತು ಪಡೆಸಬೇಕು.

ಅಂತರರಾಷ್ಟೀಯ ಮೈತ್ರಿ ಸಂಸ್ಥೆಯು ವಿಶ್ವಾದ್ಯಂತ ಸಹಕಾರ ಸಂಘಗಳನ್ನು ಅಧ್ಯಯನ ಮಾಡಿ ಈ ಮೇಲಿನ ಸಹಕಾರ ಮೌಲ್ಯಗಳನ್ನು ರೂಪಿಸಿದೆ. ಇವುಗಳ ಅಳವಡಿಕೆಯಿಂದ ಸಹಕಾರಿಗಳು ಯಶಸ್ವಿ ಸಹಕಾರ ಸಂಘಗಳನ್ನು ಕಟ್ಟಿ ಉಳಿಸಿ ಬೆಳೆಸುತ್ತಾರೆ ಎಂಬುದು ಸದಾಶಯವೇ ಸರಿ.

'ಇವನಾರವ, ಇವನಾರವ, ಇವನಾರವನೆಸದಿರಯ್ಯಾ
ಇವ ನಮ್ಮವ, ಇವನಮ್ಮವ, ಇವ ನಮ್ಮವನೆಂದಿನಿಸಯ್ಯಾ'
ಕೂಡಲ ಸಂಗಮದೇವಾ, ನಿಮ್ಮ ಮನೆಯ
ಮಗನೆಂದೆನಿಸಯ್ಯಾ' ಬಸವಣ್ಣ
ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010